ಸಂಪುಟ: 04 ಸಂಚಿಕೆ: 248 ಪುಟಗಳು: 08 ಗುರುವಾರ 21 ನವೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ಯಾವುದನ್ನು ಬಯಸಬೇಡಿ. ನಮ್ಮನ್ನು ದುಃಖಕ್ಕೊಳಪಡಿಸುವ ಎಲ್ಲಾ ಕಷ್ಟಗಳಿಗೂ ಆಸೆಯೇ ಕಾರಣ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ರಾಜ್ಯದಲ್ಲಿ 22 ಲಕ್ಷ ಅನರ್ಹ ಬಿಪಿಎಲ್ ಕಾರ್ಡ್‌ದಾರರು!

• ಉದಯವಾಹಿನಿ, ಬೆಂಗಳೂರು

ಬಡವರ ಬಿಪಿಎಲ್ ಕಾರ್ಡ್ ಕಿತ್ತುಕೊಳ್ಳುವ ಘೋರ ಅಪರಾಧವನ್ನು ರಾಜ್ಯ ಸರಕಾರ ಮಾಡಿದೆ. ಅದರಲ್ಲೂ ನಮಗೆ ಮತ ಹಾಕಿದ್ದಾರಾ ಎಂದು ಜಾತಿ, ಕೋಮು ಹುಡುಕಿ ಬಿಪಿಎಲ್ ಕಾರ್ಡ್ ರದ್ದು ಮಾಡುತ್ತಿರುವ ದೂರುಗಳಿವೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ಆರೋಪಿಸಿದರು.

ಬಡವರ ಅನ್ನಕ್ಕೂ ಕನ್ನ ಹಾಕುವ ಪರಮ ಅನ್ಯಾಯ ಇದಾಗಿದೆ ಎಂದು ಟೀಕಿಸಿದರು. ಜಾತಿ ಹುಡುಕಿ ಕಾರ್ಡ್ ರದ್ದು ಮಾಡಿದ್ದನ್ನು ಸೋಷಿಯಲ್ ಮೀಡಿಯದಲ್ಲಿ ನೋಡಿದ್ದೇನೆ. ಬಡವರ ಅನ್ನಕ್ಕೂ ಕನ್ನ ಹಾಕುವ ಸರ್ಕಾರ ಇದೆಂದು ದೂರಿದರು.

ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣ ಸ್ಥಗಿತವಾಗಿದೆ. ಅಭಿವೃದ್ಧಿಗೆ ಅನುದಾನ ಕೇಳಿದರೆ, ಮುಖ್ಯಮಂತ್ರಿಗಳು ಎಲ್ಲಿಂದ ದುಡ್ಡು ತರೋದು; ಸ್ವಲ್ಪ ತಡ್ಕೊಳ್ಳಿ ಎನ್ನುತ್ತಾರೆ. ಹಾಗಾಗಿ ಇದು ಹೊಸದೇನಲ್ಲ; ಅದಕ್ಕಾಗಿ ಬಡವರ ಅನ್ನವನ್ನೂ ಬಿಪಿಎಲ್ ಕಾರ್ಡ್ ರದ್ದು ಮೂಲಕ ಕಿತ್ತುಕೊಳ್ಳಲು ಹೊರಟಿದ್ದಾರೆ ಎಂದು ಆಕ್ಷೇಪಿಸಿದರು.

ಎಐಸಿಸಿ ಅಧ್ಯಕ್ಷ ಖರ್ಗೆಯವರು ನಿನ್ನೆ ಆರೆಸ್ಸೆಸ್, ಬಿಜೆಪಿಯನ್ನು ವಿಷ ಸರ್ಪಕ್ಕೆ ಹೋಲಿಸಿದ್ದಾರೆ. ಅನುಭವ ಪಕ್ವತೆಯನ್ನು ಪಡೆದುಕೊಳ್ಳಬೇಕು. ಹಿರಿತನಕ್ಕೆ ತಕ್ಕ ಮಾತು ಅದಲ್ಲ; ಅವರ ಮಾತುಗಳು ಹುಚ್ಚುನಾಯಿ ಕಡಿತಕ್ಕೆ ಒಳಗಾದವರು ಆಡುವ ಥರ ಮಾತಿನಂತಿತ್ತು.

ಇದು ಪಾಪಿಗಳ ಸರ್ಕಾರ

ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ಪರಿಷ್ಕರಣೆ ಕುರಿತಂತೆ ವಿವಾದ ಭುಗಿಲೆದ್ದಿದ್ದು, ಇದೀಗ ವಿಪಕ್ಷ ನಾಯಕ ಆರ್ ಅಶೋಕ್ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದು, ಬಡವರ ಮನೆಗೆ ಕನ್ನ ಹಾಕಿದಿರಲ್ಲ ನಿಮಗೆ ನಾಚಿಕೆ ಆಗಲ್ವಾ ಸಿದ್ದರಾಮಯ್ಯನವರೇ ನಿಮಗೆ ಸಾಮಾನ್ಯ ಪ್ರಜ್ಞೆಯು ಇಲ್ವಲ್ಲ ಬಡವರ ಅನ್ನ ಕಿತ್ತುಕೊಳ್ಳುತ್ತಿದ್ದೀರಿ ಅಲ್ವಾ, ದೇವರು ಒಳ್ಳೆಯದು ಮಾಡ್ತಾನ ಇದು ಪಾಪಿಗಳ ಸರಕಾರ ಎಂದು ಕಿಡಿ ಕಾರಿದರು.

ಅನರ್ಹವಾದ ಬಿಪಿಎಲ್ ಕಾರ್ಡುಗಳು	
ಕಲಬುರಗಿ	78,058
ಬೆಂಗಳೂರಿನಲ್ಲಿ ಒಟ್ಟು	65,563
ಬೆಂಗಳೂರು ಪೂರ್ವ	9,129
ಬೆಂಗಳೂರು ಉತ್ತರ	17,382
ಬೆಂಗಳೂರು ದಕ್ಷಿಣ	11,447

ರಾಜ್ಯದಲ್ಲಿ 22 ಲಕ್ಷ ಕಾರ್ಡ್ ಗಳು ಇವೆಯಂತೆ. ಕಾರ್ಡ್ ರದ್ದು ಮಾಡಬೇಕಾದರೆ ನೀವು ನೋಟಿಸ್ ಕೊಡಬೇಕಲ್ವಾ ಬಂದು ನೋಟಿಸ್ ಕೊಡಬೇಕು ಎಂಬ ಕಾಮನ್‌ಸೆನ್ಸ್ ಕೂಡ ಇಲ್ವಾ ನಿಮಗೆ ನ್ಯಾಯಬೆಲೆ ಅಂಗಡಿಗೆ ಹೋದರೆ ಸಿದ್ದರಾಮಯ್ಯ ಅವರನ್ನೇ ಕೇಳಿ ಅಂತಾರಂತೆ ಸರ್ಕಾರ ಕ್ಷೇತ್ರಗಳ ಅಭಿವೃದ್ಧಿಗೆ ಯಾವುದೇ ಅನುದಾನ ಕೊಡುತ್ತಿಲ್ಲ. ಹೀಗಾಗಿ ಸಿಎಂ ಸಿದ್ದರಾಮಯ್ಯ ಮನೆಗೆ ಯಾವ ಶಾಸಕರು ಹೋಗುತ್ತಿಲ್ಲ.

ಬಿಪಿಎಲ್ ಕಾರ್ಡ್ ರದ್ದು ಮಾಡಿದರೆ 10 ಸಾವಿರ ಕೋಟಿ ಉಳಿ ಸಬಹುದು. ಅದೇ ಹಣವನ್ನು ಶಾಸಕರಿಗೆ ನೀಡಿ ಸಮಾಧಾನಪಡಿಸ ಬಹುದು. ಅದಕ್ಕಾಗಿ ಬಿಪಿಎಲ್ ಕಾರ್ಡ್ ತೆಗೆಯುತ್ತಿದ್ದಾರೆ.

ಬಿಪಿಎಲ್ ಕಾರ್ಡ್ ಇಲ್ಲದೆ ಸರ್ಕಾರದ ಯಾವುದೇ ಸಬ್ಸಿಡಿ ಸಿಗುವುದಿಲ್ಲ. ಅದಕ್ಕಾಗಿ ನಮ್ಮ ಎಲ್ಲಾ ಶಾಸಕರು ಬೀದಿಗಿಳಿದು ಹೋರಾಟ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಬಾರದು ಎಂದರು.

> ಮಲ್ಲಿಕಾರ್ಜುನ ಖರ್ಗೆಯವರು ಆ ಮಾತನಾಡಿದ್ದಾರೋ ಅಥವಾ ಕಾಂಗ್ರೇಸ್ಸಿನ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಖರ್ಗೆಯವರ ಮೂಲಕ ಈ ಮಾತನ್ನಾಡಿಸಿದ್ದಾರೋ ಗೊತ್ತಿಲ್ಲ ಎಂದ ಅವರು, ನಿಮ್ಮ ಮಾತು ಸಂವಿಧಾನದ ಮೇಲೆ ನಂಬಿಕೆ ಇಟ್ಟವರ ಮಾತಲ್ಲ. ಹೊಡಿ, ಬಡಿ ಕೊಲ್ಲು ಎಂಬ ತಾಲಿಬಾನಿಗಳ ಮಾತಿಗೆ ವಿಷಾದ ವ್ಯಕ್ತಪಡಿಸಿ ಕ್ಷಮೆ ಯಾಚಿಸಬೇಕು
>
> -ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

> ಕೂಡಲೇ ರದ್ದುಪಡಿಸಿರುವ ಕಾರ್ಡ್ ಗಳ ಆದೇಶವನ್ನು ವಾಪಸ್ ಪಡೆಯಬೇಕು ಕಾಂಗ್ರೇಸ್ಸಿನ ಎಷ್ಟು ನಾಯಕರು ಹೆಲಿಕಾಪ್ಟರ್ ಇಟ್ಟುಕೊಂಡಿದ್ದೀರಾ ಅವತ್ತು ಕಾಕಾ ಪಾಟೀಲ್ ಗೆ ಮಹದೇವಪ್ಪಗು ಫ್ರೀ ಅಂದಿದ್ದೀರಲ್ಲ, ಇದು ಕರ್ನಾಟಕದ ಸಮಸ್ಯೆ ಇದರ ವಿರುದ್ಧ ಜನ ದಂಗೆ ಏಳಬೇಕು ಅನ್ನ ಕಿತ್ತುಕೊಂಡರೆ ನರಕ ಗ್ಯಾರಂಟಿ. ಆ ನರಕಕ್ಕೆ ನೀವು ಹೋಗುವುದು ಪಕ್ಕ
>
> -ಆರ್. ಅಶೋಕ್, ಬಿಜೆಪಿ ವಿಪಕ್ಷ ನಾಯಕ

ಸಂತ್ರಸ್ತರ ಮನೆಗಳಿಗೆ ಬಿಜೆಪಿ ನಿಯೋಗ ಭೇಟಿ

ಅನರ್ಹರ ಬಿಪಿಎಲ್ ಕಾರ್ಡ್ ರದ್ಧತಿ ವಿಚಾರ ವಿಪಕ್ಷ ಬಿಜೆಪಿಗೆ ಬ್ರಹ್ಮಾಸ್ತ್ರವಾಗಿ ಮಾರ್ಪಟ್ಟಿದೆ. ಬಿಪಿಎಲ್ ಕಾರ್ಡ್ ಕಳೆದುಕೊಂಡು ಸಂಕಷ್ಟದಲ್ಲಿರೋ ಜನರ ಮನೆಗಳಿಗೆ ಬಿಜೆಪಿ ನಿಯೋಗ ಭೇಟಿ ಕೊಟ್ಟು ಜನರ ಸಮಸ್ಯೆ ಆಲಿಸಿದೆ.

ಬೆಂಗಳೂರಿನ ಮಹಾಲಕ್ಷ್ಮಿ ಲೇ ಔಟ್, ವರ್ಷಭಾವತಿ ನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಬಿಪಿಎಲ್ ಕಾರ್ಡ್ ರದ್ದಾಗಿರುವ ಮನೆಗಳಿಗೆ ತೆರಳಿ ವಿಪಕ್ಷ ನಾಯಕ ಆರ್ ಅಶೋಕ್, ಮಾಜಿ ಸಚಿವ ಅಶ್ವತ್ಥ್ ನಾರಾಯಣ ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಸಮಸ್ಯೆ ಆಲಿಸಿದ್ದಾರೆ. ಸ್ಥಳೀಯ ಶಾಸಕ ಗೋಪಾಲಯ್ಯ

ನಕ್ಸಲ್ ಚಟುವಟಿಕೆ ನಿಯಂತ್ರಿಸಲು ವಿಕ್ರಂಗೌಡ ಎನ್ ಕೌಂಟರ್ ಹತ್ಯೆ

• ಉದಯವಾಹಿನಿ, ಬೆಂಗಳೂರು

ನಕ್ಸಲ್ ನಾಯಕ ವಿಕ್ರಂ ಗೌಡ ಹಲವು ನಕ್ಸಲ್ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾದ್ದ. ನಕ್ಸಲ್ ಚಟುವಟಿಕೆಯನ್ನು ನಿಗ್ರಹಿಸಲು ಆತನನ್ನು ಎನ್ ಕೌಂಟರ್ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ನಕ್ಸಲ್ ಚಟುವಟಿಕೆಯಲ್ಲಿ ಪ್ರಮುಖವಾಗಿ ಭಾಗಿಯಾಗಿದ್ದ ವಿಕ್ರಂ ಗೌಡನನ್ನು ಎನ್ ಕೌಂಟರ್‌ನಲ್ಲಿ ಹತನಾಗಿರುವ ಬಗ್ಗೆ ಪ್ರಗತಿಪರ ಚಿಂತಕರು ಅನುಮಾನ ವ್ಯಕ್ತಪಡಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿಎಂ, ವಿಕ್ರಂಗೌಡಗೆ ಶರಣಾಗುವಂತೆ ಆದೇಶ ನೀಡಲಾಗಿತ್ತು. ಆದರೆ ಶರಣಾಗಿರಲಿಲ್ಲ. ವಿಕ್ರಂ ಗೌಡನನ್ನು ಹಿಡಿದವರಿಗೆ ಕೇರಳ ಸರ್ಕಾರ 25 ಲಕ್ಷ ಹಾಗೂ ಕರ್ನಾಟಕ ಸರ್ಕಾರ 5 ಲಕ್ಷ ಬಹುಮಾನವನ್ನು ಘೋಷಿಸಿತ್ತು ಎಂದು ವಿವರಿಸಿದರು. ನಕ್ಸಲ್ ಚಟುವಟಿಗಳನ್ನು ನಿಯಂತ್ರಿಸಲು ವಿಕ್ರಂ ಗೌಡನನ್ನು ಎನ್ ಕೌಂಟರ್ ಮಾಡಲಾಗಿದೆ. ನಕ್ಸಲ್ ಚಟುವಟಿಕೆಗಳಿಗೆ ಯಾವುದೇ ಕಾರಣಕ್ಕೂ ಅವಕಾಶವಿಲ್ಲ ಎಂದು ತಿಳಿಸಿದರು.

ಚುನಾವಣಾ ಬಾಂಡ್ ಹೆಸರಲ್ಲಿ ಸುಲಿಗೆ ಪ್ರಕರಣ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಚುನಾವಣಾ ಬಾಂಡ್ ಹೆಸರಲ್ಲಿ ಸುಲಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಮಾಜಿ ಸಂಸದ ನಳೀನ್ ಕುಮಾರ್ ಕಟೀಲ್ ಸೇರಿದಂತೆ ಮತ್ತಿತರರ ವಿರುದ್ಧ ದಾಖಲಾಗಿದ್ದ ಎಫ್ ಐಆರ್ ಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯಪೀಠ, ದೂರುದಾರ ಆದರ್ಶ ಅಯ್ಯರ್ ಪರ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಹಾಗೂ ನಳೀನ್ ಕುಮಾರ್ ಕಟೀಲ್ ಪರ ವಕೀಲ ಕೆ.ಜಿ.ರಾಘವನ್ ಅವರ ವಾದ-ಪ್ರತಿವಾದ ಆಲಿಸಿತು. ವಾದ-ಪ್ರತಿವಾದ ಆಲಿಸಿದ ನ್ಯಾ.ನಾಗಪ್ರಸನ್ನ ಅವರಿದ್ದ ಪೀಠ, ತೀರ್ಪನ್ನು ಕಾಯ್ದಿರಿಸಿದೆ. ಪ್ರಕರಣದ ತನಿಖೆಗೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನೀಡಿದ್ದ ಆದೇಶಕ್ಕೆ ತಡೆಯಾಜ್ಞೆ ವಿಸ್ತರಿಸಿದೆ.

ನಮಗೆ ಲೋಕಾಯುಕ್ತ ತನಿಖೆ ಮೇಲೆ ಅನುಮಾನವಿದೆ: ಸ್ನೇಹಮಯಿ ಕೃಷ್ಣ

• ಉದಯವಾಹಿನಿ, ಮೈಸೂರು

ಮುಡಾ ಕೇಸ್‌ಗೆ ಸಂಬಂಧಿಸಿದಂತೆ ನಮಗೆ ಮೈಸೂರು ಲೋಕಾಯುಕ್ತ ತನಿಖೆ ಬಗ್ಗೆ ಮೊದಲಿನಿಂದಲೂ ಅನುಮಾನವಿದೆ. ಆದ್ದರಿಂದ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ನ್ಯಾಯಾಲಯದ ಗಮನ ಸೆಳೆಯಲು ಎಲ್ಲಾ ರೀತಿಯ ದಾಖಲಾತಿಗಳನ್ನು ಸಂಗ್ರಹ ಮಾಡಿಕೊಂಡಿದ್ದೇನೆ ಎಂದು ಮುಡಾ ಕೇಸ್‌ನ ದೂರುದಾರ ಸ್ನೇಹಮಯಿ ಕೃಷ್ಣ ಹೇಳಿಕೆ ನೀಡಿದ್ದಾರೆ. ನಮಗೆ ಲೋಕಾಯುಕ್ತ ತನಿಖೆಯ ಬಗ್ಗೆ ಅನುಮಾನ ಇದೆ. ಲೋಕಾಯುಕ್ತ ಸಂಸ್ಥೆ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ, ಈ ತನಿಖೆ ಬಗ್ಗೆ ನಮ್ಮಗೆ ಮೊದಲಿನಿಂದಲೂ ಅನುಮಾನ ಇದೆ. ನಿನ್ನೆ ರಾತ್ರಿ 7.30 ಸಮಯದಲ್ಲಿ ಸಿದ್ದರಾಮಯ್ಯ ಅವರ ಬಾಮೈದ ಲೋಕಾ ಯುಕ್ತ ಕಚೇರಿಗೆ ಬಂದಿರುವ ಮಾಹಿತಿ ಸಿಕ್ಕಿದೆ. ಒಬ್ಬ ತನಿಖೆ ವೇಳೆ ಅಧಿಕಾರಿಯನ್ನು ಭೇಟಿ ಮಾಡಬಾರದು ಎಂದು ನಿಯಮ ಇಲ್ಲ, ಆದರೆ ಭೇಟಿ ಮಾಡಿರುವ ಸಮಯ ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು. ಲೋಕಾಯುಕ್ತರು ನೋಟಿಸ್ ನೀಡಿದ್ದರಿಂದ ಆಫೀಸ್‌ಗೆ ಬಂದಿದ್ರಾ ಅಥವಾ ದೂರವಾಣಿ ಕರೆ ಮಾಡಿ ಬಂದಿದ್ರಾ ಅವರೇ ಸ್ವಯಂ ಪ್ರೇರಿತರಾಗಿ ಬಂದಿದ್ರಾ ಯಾವ ಉದ್ದೇಶಕ್ಕೆ ಆ ಸಮಯದಲ್ಲಿ ಬಂದಿದ್ದರೂ ಎಂದು ವಿಚಾರಣೆ ಆಗಬೇಕು. ನಾನು ಈಗಾಗಲೇ ಲೋಕಾಯುಕ್ತ ಎಸ್.ಪಿ ವಿರುದ್ಧ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದ್ದೇನೆ. ಈ ಪ್ರಕರಣ ಸಿಬಿಐಗೆ ವಹಿಸುವ ಬಗ್ಗೆ ನವೆಂಬರ್ 26 ಕ್ಕೆ ನ್ಯಾಯಾಲಯಕ್ಕೆ ಅಗತ್ಯ ದಾಖಲೆ ನೀಡಲಾಗುವುದು ಎಂದು ಹೇಳಿದರು.



ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆ ಮತದಾನ ಸಂಜೆ 5 ಗಂಟೆಗೆ ಮುಕ್ತಾಯವಾಗಿದೆ. ಅಭ್ಯರ್ಥಿಗಳ ಭವಿಷ್ಯವನ್ನು ಮತದಾರರು ಮತಯಂತ್ರದಲ್ಲಿ ಭದ್ರಗೊಳಿಸಿದ್ದಾರೆ. ಬೆಳಿಗ್ಗೆ 7 ಗಂಟೆಯಿಂದ ಆರಂಭವಾದ ಮತದಾನ ಸಂಜೆ 5 ಗಂಟೆಗೆ ಮುಕ್ತಾಯವಾಗಿದೆ. ಮಹಾರಾಷ್ಟ್ರದಲ್ಲಿ ಸಂಜೆ 5 ಗಂಟೆಯವರೆಗೆ ಶೇ.58.22ರಷ್ಟು ಮತದಾನವಾಗಿದೆ. ಜಾರ್ಖಂಡ್ ನಲ್ಲಿ ಸಂಜೆ 5 ಗಂಟೆಯವರೆಗೆ ಶೇ.67.59ರಷ್ಟು ಮತದಾನವಾಗಿದೆ. ಮಹಾರಾಷ್ಟ್ರದಲ್ಲಿ ಎಲ್ಲಾ 288 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯಿತು. ಜಾರ್ಖಂಡ್‌ನಲ್ಲಿ 2ನೇ ಹಂತದಲ್ಲಿ 38 ಕ್ಷೇತ್ರಗಳಿಗೆ ಮತದಾನ ನಡೆಯಿತು.

ಮಹಾ, ಜಾರ್ಖಂಡ್ ಮತದಾರ ಯಾರಿಗೆ ಮೂಗುದಾರ

ಜಾರ್ಖಂಡ್ 67.59%

ಪಕ್ಷೇತರ ಅಭ್ಯರ್ಥಿ ಮೃತ್ಯು

ಬೀಡ್ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರವಾಗಿ ಚುನಾವಣೆಗೆ ಸ್ಪರ್ಧಿಸಿದ್ದ ಪಕ್ಷೇತರ ಅಭ್ಯರ್ಥಿ ಬಾಳಾ ಸಾಹೇಬ್ ಶಿಂಧೆ ಎಂಬುವವರು ಮತದಾನದ ದಿನದಂದೇ ಹಠಾತ್ ಹೃದಯಾಘಾತದಿಂದ ಮೃತಪಟ್ಟ ಘಟನೆ ನಡೆದಿದೆ. ಬಾಳಾಸಾಹೇಬ್ ಶಿಂಧೆ ಬೀಡಿನ ಛತ್ರಪತಿ ಶಾಹು ವಿದ್ಯಾಲಯ ಮತ ಕೇಂದ್ರದಲ್ಲಿ ಮತ ಚಲಾಯಿಸಲು ಸರತಿ ಸಾಲಿನಲ್ಲಿ ನಿಂತಿದ್ದರು. ಈ ವೇಳೆ ಏಕಾಏಕಿ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲಾಗಿದೆ. ಈ ವೇಳೆ ಅಲ್ಲಿನ ವೈದ್ಯರ ಪರಿಶೀಲಿಸಿ ಹೃದಯಾಘಾತದಿಂದ ಮೃತಪಟ್ಟಿರುವುದಾಗಿ ಖಚಿತ ಪಡಿಸಿದ್ದಾರೆ. ಬಳಿಕ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐದು ವರ್ಷದ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಕಂಡಿರುವ ಮಹಾರಾಷ್ಟ್ರ ಚುನಾವಣೆ ಈ ಬಾರಿ ದೇಶದ ಗಮನ ಸೆಳೆದಿದೆ. ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ (ನವೆಂಬರ್ 20) ಒಂದೇ ಹಂತದಲ್ಲಿ ಚುನಾವಣೆ ನಡೆದಿದೆ. ಎಲ್ಲಾ 288 ವಿಧಾನಸಭಾ ಕ್ಷೇತ್ರಗಳಲ್ಲಿ ಬೆಳಗ್ಗೆ 7 ಗಂಟೆಗೆ ಆರಂಭವಾದ ಮತದಾನ ಸಂಜೆ 6 ಗಂಟೆಗೆ ಮುಕ್ತಾಯವಾಗಿದೆ. ನವೆಂಬರ್ 23 ರಂದು ಮತ ಎಣಿಕೆ ನಡೆಯಲಿದ್ದು, ಯಾವ ಪಕ್ಷ ಸ್ಪಷ್ಟ ಬಹುಮತ ಪಡೆಯಲಿದೆ ಎಂಬ ಬಗ್ಗೆ ದೇಶದ ಜನರಲ್ಲಿ ಕುತೂಹಲ ಮೂಡಿದೆ.

ನವೆಂಬರ್ 23 ರಂದು ಮತ ಎಣಿಕೆ

• ಉದಯವಾಹಿನಿ, ದೆಹಲಿ

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಹಿನ್ನೆಲೆ ಬಾಲಿವುಡ್ ನಟ ಶಾರುಖ್ ಖಾನ್ ಮತ್ತು ಅವರ ಪತ್ನಿ ಗೌರಿ ಖಾನ್, ಮಗಳು ಸುಹಾನಾ ಖಾನ್ ಮತ್ತು ಮಗ ಆರ್ಯನ್ ಖಾನ್ ಕೊನೆಯ ಕ್ಷಣದಲ್ಲಿ ಮುಂಬೈನಲ್ಲಿ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದರು.

ಮಹಾರಾಷ್ಟ್ರದಲ್ಲಿ ಸಂಜೆ 5 ಗಂಟೆಯ ವರೆಗೆ ಶೇಕಡ 58.22% ರಷ್ಟು ಮತದಾನ ಆಗಿದೆ. ಜಾರ್ಖಂಡ್ ವಿಧಾನಸಭಾ ಚುನಾವಣೆಯ ಮತದಾನದ ಪ್ರಮಾಣ ಶೇಕಡ 67.59% ರಷ್ಟಾಗಿದೆ. ಈ ಎರಡೂ ರಾಜ್ಯಗಳ ಚುನಾವಣೆ ಫಲಿತಾಂಶ ನವೆಂಬರ್ 23ಕ್ಕೆ ಪ್ರಕಟವಾಗಲಿದೆ.

ಬೆಳಿಗ್ಗೆಯಿಂದಲೇ ಮತದಾರರು ಕೈಯಲ್ಲಿ ಗುರುತಿನ ಚೀಟಿ ಹಿಡಿದು ಮತಗಟ್ಟೆಗಳ ಮುಂದೆ ತಮ್ಮ ಹಕ್ಕನ್ನು ಚಲಾಯಿಸಲು ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡು ಬಂತು. ಅದರಲ್ಲೂ ಇದೇ ಮೊದಲ ಬಾರಿಗೆ ಮತ ಚಲಾಯಿಸುತ್ತಿರುವ ಯುವಕ-ಯುವತಿಯರಲ್ಲಿ ಉತ್ಸಾಹ ಕಂಡು ಬಂದಿದ್ದು, ಗುರುತಿನ ಚೀಟಿ ಪ್ರದರ್ಶಿಸಿ ತಮ್ಮ ಹಕ್ಕು ಚಲಾಯಿಸಿದರು. ಆಡಳಿತಾರೂಢ ಮಹಾಯುತಿ ಭಾಗವಾಗಿರುವ ಬಿಜೆಪಿ 149 ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.

ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ 81 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮತದಾನ ನೀರಸವಾಗಿ ಆರಂಭವಾದರೂ ಹೊತ್ತು ಕಳೆಯುತ್ತಿದ್ದಂತೆ ಚುರುಕು ಪಡೆದುಕೊಂಡಿತು. ಮತದಾರರು ಮತಗಟ್ಟೆಯತ್ತ ಧಾವಿಸಿ ತಮ್ಮ ಹಕ್ಕು ಚಲಾಯಿಸಿದರು.

ಮುಂಬೈ ನಗರದಲ್ಲಿ ಕಡಿಮೆ ಮತದಾನ: ರಾಜ್ಯದ ಅತಿ ದೊಡ್ಡ ನಗರವಾಗಿರುವ ಮುಂಬೈನಲ್ಲಿನ ವಿಧಾನಸಭಾ ಕ್ಷೇತ್ರಗಳು ಹಾಗೂ ಮಹಾರಾಷ್ಟ್ರದ ನಗರ ಪ್ರದೇಶದಲ್ಲಿ ಕಡಿಮೆ ಮತದಾನವಾಗಿದೆ ಎಂದು ವರದಿಯಾಗಿದೆ. ಒಟ್ಟಾರೆ ಮಹಾರಾಷ್ಟ್ರದಲ್ಲಿ ಏಕಪಕ್ಷೀಯ ಸ್ಪರ್ಧೆ ಎಂದು ಜೆಡಿ-ಯು ನಾಯಕ ರಾಜೀವ್ ರಂಜನ್ ಪ್ರಸಾದ್ ಹೇಳಿದ್ದಾರೆ. ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟ ಗೆಲುವು ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಾರ್ಖಂಡ್ 31 ಕ್ಷೇತ್ರಗಳಿಗೆ ಮತದಾನ: ಜಾರ್ಖಂಡ್ ವಿಧಾನಸಭೆಯ ಎರಡನೇ ಹಂತದಲ್ಲಿ 38 ವಿಧಾನಸಭಾ ಕ್ಷೇತ್ರಗಳಿಗೆ ಬಿರುಸಿನ ಮತದಾನ ಬೆಳಗ್ಗೆಯಿಂದ ನಡೆದಿದ್ದು ಜನರು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.

ಎರಡನೇ ಹಂತದಲ್ಲಿ 38 ಕ್ಷೇತ್ರಗಳಿಗೆ ಮತದಾನ ನಡೆದಿದೆ. ನವೆಂಬರ್ 23 ರಂದು ಮತ ಎಣಿಕೆ ನಡೆದಿದೆ. 38 ವಿಧಾನಸಭಾ ಕ್ಷೇತ್ರಗಳಿಗೆ 12 ಜಿಲ್ಲೆಯಲ್ಲಿ ಬಾರಿ ಬಿಗಿ ಭದ್ರತೆಯಲ್ಲಿ ಮತ ದಾನ ನಡೆದಿದೆ.

ಈ ಹಂತದ 38 ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ 472 ಪುರುಷರು ಮತ್ತು 55 ಮಹಿಳಾ ಅಭ್ಯರ್ಥಿಗಳೂ ಸೇರಿದಂತೆ ಒಟ್ಟಾರೆ 528 ಮಂದಿ ಅಭ್ಯರ್ಥಿಗಳು ತಮ್ಮ ರಾಜಕೀಯ ಹಣೆಬರೆಹವನ್ನು ಅದೃಷ್ಟ ಪರೀಕ್ಷೆಗೆ ಒಡ್

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಧಾರ್ಮಿಕ ಅಧ್ಯಯನ

ಧರ್ಮದ ಹೆಸರಿನಲ್ಲಿ ಪ್ರಚೋದಕ ಹೇಳಿಕೆ - ಪ್ರತಿಕ್ರಿಯೆ, ವೈರುಧ್ಯ-ದ್ವೇಷ ಭಾಷಣ, ಆಕ್ರಮಣ ಅತ್ಯಾಚಾರ ಲೂಟಿ ಮತಾಂತರ ರಕ್ತಪಾತ ದೇಶವಿರೋಧಿಕೃತ್ಯ ಏನೇನೋ ನಡೆಯುತ್ತೆ. ಇಂಥ ಕೃತ್ಯದಲ್ಲಿ ತೊಡಗುವ ಪ್ರಚೋದಿಸುವ ಬಹುತೇಕರಿಗೆ ವಿರೋಧೀ ಧರ್ಮದ ವಾಸ್ತವಿಕ ತಿಳುವಳಿಕೆ, ಮಾತ್ರವಲ್ಲ ತಮ್ಮದೇ ಧರ್ಮದ ವಾಸ್ತವ ತಿಳುವಳಿಕೆಯೂ ಇರುವುದಿಲ್ಲ. ನೊರೆಯೇ ನೀರು ಹಾಲಲ್ಲ. ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಬಂದುದನ್ನು ನಂಬುವುದೇ ಹೆಚ್ಚು, ಆಯಾ ಧರ್ಮದ ಮೂಲ ಗ್ರಂಥಗಳ ಅವಲೋಕನ ತುಂಬಾ ವಿರಳ. ಆದ್ದರಿಂದ ಶಾಲಾ ಕಾಲೇಜು ವಿವಿಗಳಲ್ಲಿ ವಿವಿಧ ಧರ್ಮಗಳ ಮೂಲ ಗ್ರಂಥಗಳ ಏಕೀಕೃತ ತೌಲನಿಕ ಅಧ್ಯಯನ ನಡೆಯುವಂತಾಗಬೇಕು. ಹಿಂದುಗಳು ಹಿಂದುಧರ್ಮದ ಜೊತೆಗೆ ಇಸ್ಲಾಂ ಕ್ರೈಸ್ತ ಧರ್ಮಗಳನ್ನು, ಕ್ರೈಸ್ತರು ಕ್ರೈಸ್ತ ಧರ್ಮದ ಜೊತೆಗೆ ಹಿಂದೂ ಇಸ್ಲಾಂ ಧರ್ಮಗಳನ್ನು, ಮುಸ್ಲಿಮರು ಇಸ್ಲಾಂ ಧರ್ಮದ ಜೊತೆಗೆ ಹಿಂದು ಕ್ರೈಸ್ತ ಧರ್ಮಗಳನ್ನು ಓದುವಂತಾಗಬೇಕು. ಮಾತ್ರವಲ್ಲ ಅವುಗಳ ಮೇಲೆ ಮುಕ್ತವಾದ ಚರ್ಚೆ ಪರಿಷ್ಕಾರ ತಿದ್ದುಪಡಿ ಮಾಡುವುದಕ್ಕೂ ಅವಕಾಶವಾಗಬೇಕು. ಯಾವುದೂ ನಿಂತ ನೀರಿನಂತಾಗಬಾರದು.

ಹರಿದಾಸ ನಮನ ಗಾಯನ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ನವೆಂಬರ್ 21, ಗುರುವಾರ ಸಂಜೆ 5-30ಕ್ಕೆ ಕು|| ರಕ್ಷಿತಾ ಶರ್ಮಾ ಅವರ ನಿರ್ದೇಶನದಲ್ಲಿ ಇಂಪು ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ಹರಿದಾಸ ನಮನ ಗಾಯನ ಕಾರ್ಯಕ್ರಮ ಏರ್ಪಡಿಸಿದ್ದು, ಶ್ರೀಮತಿ ಅರ್ಚನಾ ಮರಾಠೆ ಪಿಟೀಲು ವಾದನದಲ್ಲಿ ಹಾಗೂ ಶ್ರೀ ಶ್ರೀಧರ್ ಮೃದಂಗ ವಾದನದಲ್ಲಿ ಸಾಥ್ ನೀಡಲಿದ್ದಾರೆ ಎಂದು ಶ್ರೀ ನಂದಕಿಶೋರ್ ಆಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41

ರೈತರಿಗೆ ಗುಡ್ ನ್ಯೂಸ್ : ಶೀಘ್ರವೇ ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ ಸ್ಥಾಪನೆ

• ಉದಯವಾಹಿನಿ, ಬೆಂಗಳೂರು

ಶೀಘ್ರವೇ 'ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ' ಸ್ಥಾಪನೆ ಮಾಡಲಾಗುತ್ತದೆ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಹೇಳಿದ್ದಾರೆ. ಕೃಷಿ ಇಲಾಖೆಯ ಪ್ರಮುಖ ಆಧಾರ ಸ್ತಂಭಗಳಾದ ಬೀಜೋತ್ಪಾದನಾ ಕೇಂದ್ರಗಳು, ರೈತ ಸಂಪರ್ಕ ಕೇಂದ್ರಗಳು, ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ಮತ್ತು ಜೈವಿಕ ನಿಯಂತ್ರಣ/ ಪರತಂತ್ರ ಜೀವಿ ಪ್ರಯೋಗಾಲಯಗಳನ್ನು ಒಂದೇ ಸೂರಿನಡಿ ತಂದು ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಲು ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದೆ ಎಂದು ಕೃಷಿ ಸಚಿವ ಎನ್ ಚೆಲುವರಾಯಸ್ವಾಮಿ ಹೇಳಿದ್ದಾರೆ. ಬೀಜೋತ್ಪಾದನೆ, ರೈತ ಸಂಪರ್ಕ, ಕೃಷಿ ತರಬೇತಿ ಹಾಗೂ ಜೈವಿಕ ಪ್ರಯೋಗಾಲಯವನ್ನು ಒಂದೇ ಸೂರಿನಡಿ ತರಲು ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ ಸ್ಥಾಪಿಸಲಾಗುವುದು ಎಂದು ಕೃಷಿ ಸಚಿವರಾದ ಚಲುವರಾಯಸ್ವಾಮಿ ಅವರು ತಿಳಿಸಿದ್ದಾರೆ. ವಿಕಾಸಸೌಧದಲ್ಲಿ ಕರ್ನಾಟಕ ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ ಸ್ಥಾಪನೆ ಕುರಿತು ಸಭೆ ಹಮ್ಮಿಕೊಳ್ಳಲಾಯಿತು. ಈ ಏಜೆನ್ಸಿಯು ಕೃಷಿ ಇಲಾಖೆಯ ಪ್ರಮುಖ ಆಧಾರ ಸ್ತಂಭಗಳನ್ನು ಒಂದೇ ಸೂರಿನಡಿ ಅಭಿವೃದ್ಧಿಪಡಿಸಲಿದೆ ಎಂದಿದ್ದಾರೆ.

ಶಿಕ್ಷಣ ಸಚಿವರಿಗೆ ಕನ್ನಡ ಬರಲ್ಲ ಎಂದ ವಿದ್ಯಾರ್ಥಿ: ಗರಂ ಆದ ಸಚಿವರು

• ಉದಯವಾಹಿನಿ, ಬೆಂಗಳೂರು

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಕನ್ನಡ ಭಾಷೆ, ಅವರ ಮಾತುಗಳು ಆಗಾಗ ಚರ್ಚೆಯಾಗುತ್ತಲೇ ಇರುತ್ತವೆ. ಇದೀಗ ಶಿಕ್ಷಣ ಸಚಿವ ಕನ್ನಡದ ಬಗ್ಗೆ ವಿದ್ಯಾರ್ಥಿಗಳೇ ಕಾಲೆಳೆದಿರುವ ಘಟನೆ ನಡೆದಿದೆ. ವಿದ್ಯಾರ್ಥಿಗಳೊಂದಿಗಿನ ಆನ್ ಲೈನ್ ಸಂವಾದ ಕಾರ್ಯಕ್ರಮದ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ನಗೆಪಾಟಲಿಗೀಡಾಗಿದ್ದಾರೆ. ವಿದ್ಯಾರ್ಥಿಯೋರ್ವ 'ಶಿಕ್ಷಣ ಸಚಿವರಿಗೆ ಕನ್ನಡ ಬರಲ್ಲ' ಎಂದಿದ್ದಾನೆ. ವಿದ್ಯಾರ್ಥಿ ಹೇಳಿಕೆಗೆ ಸಭೆಯಲ್ಲಿ ಎಲ್ಲರೂ ನಕ್ಕಿದ್ದಾರೆ. ಇದರಿಂದ ಶಿಕ್ಷಣ ಸಚಿವ ಮಧುಬಂಗಾರಪ್ಪ ಮುಜುಗರಕ್ಕೀಡಾಗಿದ್ದಾರೆ. ವಿದ್ಯಾರ್ಥಿ ಹೇಳಿಕೆಗೆ ಗರಂ ಆದ ಸಚಿವ ಮಧು ಬಂಗಾರಪ್ಪ, ಯಾರೋ ಅದು ಹಾಗೇ ಹೇಳಿದ್ದು? ಎಂದು ಗದರಿದ್ದಾರೆ. ನಾನು ಕನ್ನಡ ಅಥವಾ ಉರ್ದು ಮಾತನಾಡುತ್ತೇನೆ. ವಿದ್ಯಾರ್ಥಿಗೆ ಹೀಗೆ ಹೇಳು ಎಂದು ಹೇಳಿಕೊಟ್ಟವರು ಯಾರು? ಆತನನ್ನು ಸುಮ್ಮನೆ ಬಿಡಬೇಡಿ. ಏನು ಅಂತಾ ಕೇಳಿ ಎಂದು ಸಚಿವರು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಅವರಿಗೆ ಸೂಚಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಅಘಾಡಿಯೇ ಅಧಿಕಾರಕ್ಕೆ ಬರುತ್ತದೆ

• ಉದಯವಾಹಿನಿ, ಬೆಂಗಳೂರು

ಮಹಾರಾಷ್ಟ್ರ, ಜಾರ್ಖಂಡ್‌ನಲ್ಲಿ ಇಂದು ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಮಹಾರಾಷ್ಟ್ರದಲ್ಲಿ ತಮ್ಮ ಮಿತ್ರ ಪಕ್ಷವಾದ ಮಹಾ ವಿಕಾಸ್ ಅಘಾಡಿಯೇ ಅಧಿಕಾರಕ್ಕೆ ಬರುತ್ತದೆ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಎ 2 ರಾಜ್ಯಗಳಲ್ಲಿ ಕಾಂಗ್ರೇಸ್ ಪಕ್ಷವೇ ಮೇಲುಗೈ ಸಾಧಿಸುತ್ತದೆ. ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಅಘಾಡಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ಹೇಳಿದ್ದಾರೆ. ಇಂದು ಎರಡೂ ರಾಜ್ಯಗಳಲ್ಲಿ ಮತದಾನ ನಡೆಯುತ್ತಿದ್ದು, ಮಧ್ಯಾಹ್ನ 1 ಗಂಟೆಯವರೆಗೆ ಮಹಾರಾಷ್ಟ್ರದಲ್ಲಿ ಮತದಾರರಿಂದ ನೀರಸ ಪ್ರತಿಕ್ರಿಯೆ ಲಭಿಸಿದೆ. ಇನ್ನು ಜಾರ್ಖಂಡ್‌ನಲ್ಲಿ ನಡೆಯುತ್ತಿರುವ ಎರಡನೇ ಹಂತದ ಮತದಾನದಲ್ಲಿ ದಾಖಲೆ ಪ್ರಮಾಣದ ಮತದಾನವಾಗಿದೆ.

ಹಿರಿಯ ಪತ್ರಕರ್ತ, ಸಾಹಿತಿ ವಿ.ಟಿ.ರಾಜಶೇಖರ್ ನಿಧನಕ್ಕೆ ಸಿಎಂ ಸಿದ್ದರಾಮಯ್ಯ ಸಂತಾಪ.!

• ಉದಯವಾಹಿನಿ, ಬೆಂಗಳೂರು

ಹಿರಿಯ ಪತ್ರಕರ್ತ, ಸಾಹಿತಿ ವಿ.ಟಿ.ರಾಜಶೇಖರ್ ನಿಧನಕ್ಕೆ ಸಿಎಂ ಸಂತಾಪ ಸೂಚಿಸಿದ್ದಾರೆ. ಪ್ರಖ್ಯಾತ ಪತ್ರಕರ್ತ, ಪ್ರಖರ ಚಿಂತಕ, ಹೋರಾಟಗಾರ ವಿ.ಟಿ.ರಾಜಶೇಖರ್ (93) ಅವರ ನಿಧನದಿಂದ ಆಘಾತಕ್ಕೀಡಾಗಿದ್ದೇನೆ. ಪತ್ರಿಕಾ ವೃತ್ತಿಯನ್ನು ಒಬ್ಬ ಹೋರಾಟಗಾರನಾಗಿಯೇ ಮುನ್ನಡೆಸಿದ್ದ ರಾಜಶೇಖರ್, ಜಾತಿ ವ್ಯವಸ್ಥೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಸದಾ ಸಿಡಿಯುತ್ತಿದ್ದವರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ 2 ದಶಕಗಳ ಕಾಲ ಸೇವೆ ಸಲ್ಲಿಸಿದ್ದ ನಂತರ ಅಲ್ಲಿಂದ ಹೊರಬಂದು 1981ರಲ್ಲಿ ದಲಿತ್ ವಾಯ್ಸ್ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ದಿನಗಳಿಂದಲೇ ಪರಿಚಿತರಾಗಿದ್ದ ರಾಜಶೇಖರ್ ಒಬ್ಬ ಹಿರಿಯ ಹಿತೈಷಿಯಾಗಿ ನನಗೆ ಮಾರ್ಗದರ್ಶನ ನೀಡುತ್ತಿದ್ದವರು. ರಾಜಶೇಖರ್ ಅವರ ಸಾವು ಸಮಾಜಕ್ಕೆ ದೊಡ್ಡ ನಷ್ಟ ಮಾತ್ರವಲ್ಲ, ಅವರಂತಹ ಜನಪರ ಚಿಂತಕರ ನಿಧನದಿಂದ ಸೃಷ್ಟಿಯಾಗಿರುವ ನಿರ್ವಾತವನ್ನು ತುಂಬುವುದು ಕೂಡಾ ಕಷ್ಟ, ತಂದೆಯನ್ನು ಕಳೆದುಕೊಂಡ ಅಮ್ನೆಷ್ಟಿ ಇಂಟರ್ ನ್ಯಾಷನಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ, ಮಗ ಸಲೀಲ್ ಶೆಟ್ಟಿ, ಕುಟುಂಬ ವರ್ಗ, ಅಭಿಮಾನಿಗಳ ದು:ಖದಲ್ಲಿ ನಾನು ಭಾಗಿಯಾಗಿದ್ದೇನೆ ಎಂದು ಟ್ವೀಟ್ ಮಾಡಿದ್ದಾರೆ.

ರೂ.19,000 ಕೋಟಿ ಬಂಡವಾಳ, ಶೀಘ್ರವೇ ಕರ್ನಾಟಕ 2ನೇ ಸ್ಥಾನ

ಜೆಕೆವಿಕೆ ಆವರಣದಲ್ಲಿ ಆಯೋಜನೆಗೊಂಡಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆಟಲ್ಸ್ ಸಂಸ್ಥೆಯ 78ನೇ ವಾರ್ಷಿಕ ತಾಂತ್ರಿಕ ಸಮಾವೇಶ

• ಉದಯವಾಹಿನಿ, ಬೆಂಗಳೂರು

ಜಪಾನ್, ಜರ್ಮನಿ, ದಕ್ಷಿಣ ಕೋರಿಯಾ ಸೇರಿದಂತೆ ಮೊದಲಾದ ದೇಶಗಳಲ್ಲಿ ಪ್ರವಾಸ ಕೈಗೊಂಡು ಅಧಿಕ ಬಂಡವಾಳ ಸೆಳೆಯುವಲ್ಲಿ ಕರ್ನಾಟಕ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ್ ಅವರು ಯಶಸ್ವಿಯಾಗಿದ್ದರು. ಇದೀಗ ಮುಂದಿನ ಕೆಲವೇ ದಿನಗಳಲ್ಲಿ ಸಾವಿರಾರು ಕೋಟಿ ಬಂಡವಾಳ ರಾಜ್ಯಕ್ಕೆ ಹರಿದು ಬರಲಿದೆ.

ಈ ಮೂಲಕ ರಾಜ್ಯಕ್ಕೆ ಬಂಡವಾಳ ಹೂಡಿಕೆಯಲ್ಲಿನ ಈಗಿರುವ ಮೂರನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಬರಲಿದೆ ಎಂದು ಸರ್ಕಾರ ತಿಳಿಸಿದೆ. ಕರ್ನಾಟಕ ಕೈಗಾರಿಕಾ ಕ್ಷೇತ್ರದ ಬಂಡವಾಳ ಹೂಡಿಕೆಯಲ್ಲಿ ಸದ್ಯಕ್ಕೆ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. 2025ರ ಜೂನ್ ವೇಳೆಗೆ ದ್ವಿತೀಯ ಸ್ಥಾನಕ್ಕೆ ಏರಲಿದೆ. ಈಗ ಆಗಿರುವ 54,427 ಕೋಟಿ ರೂ. ಹೂಡಿಕೆಯ ಜತೆಗೆ ಮುಂದಿನ 6-7 ತಿಂಗಳಲ್ಲಿ ಇನ್ನೂ 19,059 ಸಾವಿರ ಕೋಟಿ ರೂ. ಬಂಡವಾಳ ಹರಿದು ಬರುವುದು ಖಚಿತವಾಗಿದೆ. ಈ ಮೂಲಕ ರಾಜ್ಯವು 73 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಹೂಡಿಕೆಯನ್ನು ಕಾಣಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಮಾಹಿತಿ ನೀಡಿದರು.

ಉದಯವಾಹಿನಿ ಚಿತ್ರ

ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಮಾತನಾಡಿ, ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮಾತ್ರವಲ್ಲದೆ ಸೆಮಿಕಂಡಕ್ಟರ್, ವಿದ್ಯುನ್ಮಾನ, ಚಿಪ್ ವಿನ್ಯಾಸ, ನವೋದ್ಯಮ, ವಿದ್ಯುಚ್ಚಾಲಿತ ವಾಹನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆಯೂ ಸಮರ್ಥ ನೀತಿಗಳನ್ನು ಹೊಂದಿದೆ. ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಕೌಶಲ ಪೂರ್ಣವನ್ನಾಗಿಸಿ, ಅವರೆಲ್ಲರನ್ನೂ ಉದ್ಯೋಗಕ್ಕೆ ಸಜ್ಜುಗೊಳಿಸಲಾಗುವುದು ಎಂದರು.

ಬೆಂಗಳೂರು ಜೆಕೆವಿಕೆ ಆವರಣದಲ್ಲಿ ಆಯೋಜನೆಗೊಂಡಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆಟಲ್ಸ್ ಸಂಸ್ಥೆಯ 78ನೇ ವಾರ್ಷಿಕ ತಾಂತ್ರಿಕ ಸಮಾವೇಶ ಉದ್ಘಾಟಿಸಿ ಅವರು ಮಾತ ನಾಡಿದರು.

ರಾಜ್ಯವು ಈ ವರ್ಷ ಈಗಾಗಲೇ 21 ವಿವಿಧ ಉದ್ಯಮಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಇದರಿಂದ 46,375 ಕೋಟಿ ರೂ. ಬಂಡವಾಳ ಹರಿದು ಬರಲಿದೆ. 27 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ. ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಗಳ ಮೂಲಕ 90 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಹೂಡಿಕೆ ಆಗಲಿರುವಂತಹ ಒಟ್ಟು 669 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ಕೊಡಲಾಗಿದೆ. ಇವುಗಳಿಂದಾಗಿ 1.73 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿವೆ ಎಂದು ಅವರು ವಿವರಿಸಿದ್ದಾರೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಉದ್ಯಮ ಕ್ಷೇತ್ರದಲ್ಲಿ ಈಗ ಡಿಜಿಟಲ್ ಉತ್ಪಾದನೆ, ಕೃತಕ ಬುದ್ಧಿಮತ್ತೆ ಮತ್ತು ಆಟೋಮೇಶನ್ ನಿರ್ಣಾಯಕವಾಗಿದ್ದು ಹೊಸ ಬಗೆಯ ಶಕ್ತಿ ಸಾಮರ್ಥ್ಯಗಳನ್ನು ತಂದು ಕೊಟ್ಟಿವೆ. ಸುಧಾರಿತ ಅಲಾಯ್ಸ್, ಅತ್ಯಧಿಕ ಸಾಮರ್ಥ್ಯದ ಉಕ್ಕು ಮತ್ತು ಸುಸ್ಥಿರ ಮೆಟೀರಿಯಲ್‌ಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ.

ಕೈಗಾರಿಕಾ ಅಭಿವೃದ್ಧಿಯ ಜತೆಯಲ್ಲೇ ಪರಿಸರ ಸಂರಕ್ಷಣೆ ಮತ್ತು ಎಲ್ಲರನ್ನೂ ಒಳಗೊಂಡಿರುವ ಬೆಳವಣಿಗೆಗಳ ಜತೆಗೆ ಸಮತೋಲನ ಸಾಧಿಸುವ ಸವಾಲು ನಮ್ಮ ಮುಂದಿದೆ. ಮೆಟಲ್ಸ್ (ಲೋಹಗಳು) ಮತ್ತು ಮೆಟೀರಿಯಲ್ಸ್ ವಲಯಗಳಲ್ಲಿ ಇವೆಲ್ಲವನ್ನೂ ಸಾಧ್ಯವಾಗಿಸುವಂತಹ ಸಂಶೋಧನೆ ಮತ್ತು ನಾವೀನ್ಯತಾ ಉಪಕ್ರಮಗಳಿಗೆ ರಾಜ್ಯ ಆದ್ಯತೆ ನೀಡುತ್ತಿದೆ ಎಂದರು.

ಮೆಟಲ್ಸ್, ಮೆಟೀರಿಯಲ್ಸ್ ಕ್ಷೇತ್ರವೂ ಸೇರಿದಂತೆ ಎಲ್ಲಾ ವಲಯಗಳಲ್ಲೂ ಕರ್ನಾಟಕವು ಪರಿಸರ ಸ್ನೇಹಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುತ್ತಿದೆ. ಲೋಹ ಮತ್ತು ಅದಕ್ಕೆ ಪೂರಕವಾದ ವಲಯಗಳು ಆರ್ಥಿಕ ಅಭಿವೃದ್ಧಿಯ ಆಚೆಗೂ ತಮ್ಮ ಪ್ರಭಾವ ಬೀರುತ್ತವೆ. ಕ್ಷಿಪ್ರವಾಗಿ ಬೆಳವಣಿಗೆ ಕಾಣುತ್ತಿರುವ ಜಗತ್ತಿನಲ್ಲಿ ಉದ್ಭವಿಸುತ್ತಿರುವ ಸಂಕೀರ್ಣ ಸಮಸ್ಯೆಗಳಿಗೆ ಉದ್ಯಮಿಗಳು ಸರಿಯಾದ ಪರಿಹಾರವನ್ನು ಕಂಡುಕೊಳ್ಳಬೇಕಾದ ಅಗತ್ಯವಿದೆ ಎಂದು ತಿಳಿಸಿದರು.

ಬೆಂಗಳೂರಿನ ಆಸ್ತಿ ಮಾಲೀಕರ ಗಮನಕ್ಕೆ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಘೋಷಿಸಿದ್ದ ಒಂದು ಬಾರಿ ತೀರುವಳಿ ಯೋಜನೆ ನವೆಂಬರ್ 30 ಕ್ಕೆ ಮುಕ್ತಾಯವಾಗಲಿದ್ದು, ಆಸ್ತಿ ಮಾಲಿಕರು ಇದರ ಪ್ರಯೋಜನ ಪಡೆಯಬಹುದಾಗಿದೆ. ಒಂದು ಬಾರಿ ಪರಿಹಾರ ಯೋಜನೆಯನ್ನು (ಒಟಿಎಸ್) ಹೆಚ್ಚಿನ ವೈಶಿಷ್ಟ್ಯತೆಗಳೊಂದಿಗೆ ನವೆಂಬರ್ 30ರ ವರೆಗೆ ವಿಸ್ತರಿಸಲಾಗಿದೆ. ದಂಡ ಮತ್ತು ಬಡ್ಡಿ ರಹಿತ ಪಾವತಿಗೆ ಇದೊಂದು ಕೊನೆಯ ಅವಕಾಶವನ್ನು ನೀಡಲಾಗಿದೆ.

ಒಟಿಎಸ್ (ಒನ್ ಟೈಮ್ ಸೆಟ್ಲಮೆಂಟ್) ಯೋಜನೆಯಡಿ ಆಸ್ತಿ ತೆರಿಗೆ ಪಾವತಿಸಲು ಕಟ್ಟಕಡೆಯ ಅವಕಾಶ ನೀಡಲಾಗುತ್ತಿದ್ದು, ನವೆಂಬರ್ 30ರವರೆಗೆ ಮಾತ್ರ ಇದು ಚಾಲ್ತಿಯಲ್ಲಿರಲಿದೆ. ತೆರಿಗೆ ಬಾಕಿ ಉಳಿಸಿ ಕೊಂಡಿರುವವರು ಕೊನೆಯ ದಿನಾಂಕದ ಒಳಗಾಗಿ ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬಹುದಾಗಿದೆ.

ಸದುಪಯೋಗಪಡಿಸಿಕೊಳ್ಳಿ ಎಂದು ಸರ್ಕಾರ ಪ್ರಕಟಣೆ ಹೊರಡಿಸಿದೆ. ಆನ್ಲೈನ್ ಮೂಲಕ ಪಾವತಿಸಲು ಈ ಲಿಂಕ್ ಮೇಲೆ ಕ್ಲಿಕ್ ಮಾಡಿ (https://bbmptax.karnataka.gov.in/ಆಸ್ತಿ ತೆರಿಗೆ ಎಷ್ಟು ಪಾವತಿಸಬೇಕಿದೆ, ಎಲ್ಲಿ ಪಾವತಿಸಬೇಕು ಎಂಬ ಬಗ್ಗೆ ಗೊಂದಲಗಳಿದ್ದಲ್ಲಿ ಸಹಾಯವಾಣಿ 1533 ಗೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಪ್ರಕಟಣೆ ಹೊರಡಿಸಿದೆ. ಬಿಬಿಎಂಪಿ ಕಾಯ್ದೆಯಲ್ಲಿ ಆಸ್ತಿತೆರಿಗೆ ಬಾಕಿ ವಸೂಲಾತಿಗೆ ಅವಕಾಶವಿದೆ. ಆದಾಗ್ಯೂ, ಒಟಿಎಸ್ ನಾಗರಿಕರಿಗೆ ಸಹಾಯ ಮಾಡಲು ಸರ್ಕಾರ ಮತ್ತು ಬಿಬಿಎಂಪಿಯೂ ಜೊತೆಯಾಗಿ ಕಾರ್ಯನಿರ್ವಹಿಸಲಿದೆ. ನಾಗರಿಕರು(https://bbmptax.karnataka.gov.in/ಮೂಲಕ ಆನ್ಲೈನ್‌ನಲ್ಲಿ ಆಸ್ತಿತೆರಿಗೆಯನ್ನು ಸುಲಭವಾಗಿ ಪಾವತಿಸಬಹುದು ಎಂದು ಪ್ರಕಟಣೆ ಹೊರಡಿಸಿದೆ.

27 ಕೆಜಿ ಗಾಂಜಾ ಬೆಳೆ: ಅದು ತಂತಾನೇ ಬೆಳೆದಿದ್ದು ಮೈಲಾರ್ಡ್ ವಕೀಲ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ 67 ವರ್ಷದ ವ್ಯಕ್ತಿಯೊಬ್ಬರು ಮನೆಯ ಹಿತ್ತಲಿನಲ್ಲಿ ಗಾಂಜಾ ಬೆಳೆದಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇಂದು ಹೈ ಕೋರ್ಟ್ ವಿಚಾರಣೆ ನಡೆಸಿದ್ದು, ಈ ವೇಳೆ ಆರೋಪಿ ಪರ ವಕೀಲರು ಆರೋಪಿ ಅದನ್ನು ಸೇವಿಸಲು ಅಥವಾ ಮಾರಾಟ ಮಾಡಲು ಬೆಳೆದಿಲ್ಲ ಎಂದು ಹೇಳಿದರು.

ಹೈ ಕೋರ್ಟ್ ನ್ಯಾಯಾಧೀಶರಾದ ಎಂ. ನಾಗಪ್ರಸನ್ನ ಅವರಿದ್ದ ಪೀಠವು ಇಂದು ವಿಚಾರಣೆ ನಡೆಸಿದ್ದಾರೆ. ಈ ವೇಳೆ ಆರೋಪಿ ಚಂದ್ರಶೇಖರ್ ಪರ

16 ತಿಂಗಳಲ್ಲಿ 1,601 ಎಕರೆ ಭೂಮಿ ಮಂಜೂರು!

ಭೂಮಿ ಮಂಜೂರಾತಿ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿ ಅಕ್ರಂ ಪಾಷಾ ಸಾಕ್ಷ್ಯ ಸಮೇತ ದಾಖಲಾತಿ ಬಿಡುಗಡೆ

• ಉದಯವಾಹಿನಿ, ಕೋಲಾರ

ವಕ್ಫ್‌ಗೆ ಜಮೀನಿನ ಖಾತೆ ವರ್ಗಾವಣೆ ವಿವಾದ ಹಾಗೂ ಬೇರೆ ಸಮುದಾಯಕ್ಕೆ ಜಮೀನು ನೀಡಿಲ್ಲ ಎಂಬ ಟೀಕೆ ವ್ಯಕ್ತವಾದ ಬೆನ್ನಲೇ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಜಿಲ್ಲಾಡಳಿತದಿಂದ ಭೂಮಿ ಮಂಜೂರಾತಿ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿ ಅಕ್ರಂ ಪಾಷಾ ಸಾಕ್ಷ್ಯ ಸಮೇತ ದಾಖಲಾತಿ ಬಿಡುಗಡೆ ಮಾಡಿದ್ದಾರೆ. ಕಳೆದ 16 ತಿಂಗಳಲ್ಲಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸುಮಾರು 1,601 ಎಕರೆ ಭೂಮಿಯನ್ನು ಮಂಜೂರು ಮಾಡಿರುವುದಾಗಿ ಹೇಳಿದ್ದಾರೆ.

ಅಕ್ರಂ ಪಾಷಾ 2023ರ ಜೂನ್ 19ರಂದು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಆಗಿನಿಂದ ಯಾವ ಇಲಾಖೆಗೆ ಎಷ್ಟು ನಿವೇಶನ, ಭೂಮಿ ನೀಡಲಾಗಿದೆ, ಯಾವ ಉದ್ದೇಶಕ್ಕೆ ನೀಡಲಾಗಿದೆ ಎಂಬುದನ್ನು ಇಲಾಖಾವಾರು, ತಾಲ್ಲೂಕುವಾರ ಅಂಕಿ ಅಂಶ ನೀಡಿದ್ದಾರೆ.

ಈಚೆಗೆ ಮಾಜಿ ಸಂಸದ ಹಾಗೂ ಬಿಜೆಪಿ ಮುಖಂಡ ಎಸ್. ಮುನಿಸ್ವಾಮಿ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ವಕ್ಫ್‌ಗೆ ಭೂಮಿ ಮಂಜೂರಾತಿಯಲ್ಲಿ ಜಿಲ್ಲಾಧಿಕಾರಿ ಪಾತ್ರವಿದ್ದು, ಬೇರೆ ಯಾವುದೇ ಸಮುದಾಯಕ್ಕೆ ಜಮೀನು ನೀಡಿಲ್ಲವೆಂದು ಆರೋಪಿಸಿದ್ದರು. ಜಿಲ್ಲಾಧಿಕಾರಿಯು ತಮ್ಮ ಸಾಧನೆಗಳ ಬಗ್ಗೆ

ಉದಯವಾಹಿನಿ ಚಿತ್ರ

ಸಂವಾದವೊಂದರಲ್ಲಿ ಹೇಳಿಕೊಂಡಿದ್ದಾರೆ. ಅದು ಕೋಲಾರದಿಂದ ಅವರ ವಿದಾಯದ ಸಂವಾದವಾಗಿದೆ. ವಾರದಲ್ಲಿ ವರ್ಗಾವಣೆ ಆಗಲಿದ್ದಾರೆ. ಜಿಲ್ಲೆಯಲ್ಲಿ ಬೇರೆಬೇರೆ ಸಮುದಾಯದವರು ಇಷ್ಟು ಜನಸಂಖ್ಯೆ ಇದ್ದರೂ ಸಮುದಾಯ ಭವನ, ಸ್ಮಶಾನ, ಶಾಲೆ, ಅಂಗನವಾಡಿ, ಆಟದ ಮೈದಾನ ನೀಡಲು ಮಾತ್ರ ಜಾಗದ ಕೊರತೆ ಎದ್ದು ಕಾಣುತ್ತಿದೆ. 500 ಶಾಲೆಗಳು ಸೋರುತ್ತಿವೆ. ಆದರೆ, ಕೋಲಾರ ತಾಲ್ಲೂಕಿನಲ್ಲೇ 218 ಎಕರೆಯನ್ನು ಒಂದು ಸಮುದಾಯಕ್ಕೆ ನೀಡಿದ್ದಾರೆ' ಎಂದು ದೂರಿದ್ದರು. ಈಗಾಗಲೇ ಒಟ್ಟು 1,526.10 ಎಕರೆ ಭೂಮಿ ವಿವಿಧ ಇಲಾಖೆಗಳಿಗೆ ಮಂಜೂರಾಗಿದೆ. ಇನ್ನು 73.05 ಎಕರೆ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದಿದ್ದಾರೆ. ಕೋಲಾರ ತಾಲ್ಲೂಕಿನಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ 24.28 ಎಕರೆ, ಇಂಧನ ಇಲಾಖೆಗೆ 63.21 ಎಕರೆ,

ಜಿಲ್ಲಾಧಿಕಾರಿ ದಾಖಲೆ ಬಿಡುಗಡೆ

ಖಾತೆ ಬದಲಾವಣೆ ಕೋರಿ ಕೋಲಾರ ತಾಲ್ಲೂಕಿನಲ್ಲಿ 25 ಶ್ರೀನಿವಾಸಪುರ ತಾಲ್ಲೂಕಿನಲ್ಲಿ 42 ಬಂಗಾರಪೇಟೆ ತಾಲ್ಲೂಕಿನಲ್ಲಿ 43 ಮಾಲೂರು ತಾಲ್ಲೂಕಿನಲ್ಲಿ 14 ಕೆಜಿಎಫ್ ತಾಲ್ಲೂಕಿನಲ್ಲಿ 5 ಸೇರಿದಂತೆ 120ಕ್ಕೂ ಹೆಚ್ಚು ಪ್ರಕರಣಗಳಲ್ಲಿ ವಕ್ಫ್‌ನಿಂದ ಮನವಿ ಬಂದಿತ್ತು. ಈ ಸಂಬಂಧವೂ ಜಿಲ್ಲಾಧಿಕಾರಿ ದಾಖಲೆ ಬಿಡುಗಡೆ ಮಾಡಿದ್ದಾರೆ.

ಇಲಾಖೆ ಕಟ್ಟಡಗಳಿಗೆ 17.36 ಎಕರೆ, ಸರ್ಕಾರಿ ಶಾಲೆಗಳಿಗೆ 7.15 ಎಕರೆ ಜಮೀನನ್ನು ಅಕ್ರಂ ಪಾಷಾ ಮಂಜೂರು ಮಾಡಿದ್ದಾರೆ. ಮಾಲೂರು ತಾಲ್ಲೂಕಿನಲ್ಲಿ ಇಂಧನ ಇಲಾಖೆಗೆ 68.20 ಎಕರೆ, ಸರ್ಕಾರಿ ಶಾಲೆಗೆ 8.08 ಎಕರೆ, ಸ್ಮಶಾನಕ್ಕೆ 4.09 ಎಕರೆ ಜಮೀನು ಮಂಜೂರು ಮಾಡಿದ್ದಾರೆ. ಮುಳಬಾಗಿಲು ತಾಲ್ಲೂಕಿನಲ್ಲಿ ಇಂಧನ ಇಲಾಖೆಗೆ 105 ಎಕರೆ, ಸ್ಮಶಾನಕ್ಕೆ 7.19 ಎಕರೆ, ಶಾಲಾ ಕಾಲೇಜಿಗೆ 6.09 ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ಶ್ರೀನಿವಾಸಪುರದಲ್ಲಿ ಇಂಧನ ಇಲಾಖೆಗೆ 65 ಎಕರೆ, ಸರ್ಕಾರಿ ಶಾಲಾ ಕಾಲೇಜುಗಳಿಗೆ 14.38 ಎಕರೆ, ಅರಣ್ಯ ಇಲಾಖೆಗೆ 10

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಜಮೀನು ಖಾತೆ ವರ್ಗಾವಣೆ ಕೋರಿ ವಕ್ಫ್ ಮಂಡಳಿಯಿಂದ ಮನವಿ ಬಂದಿದ್ದು ನಿಜವೆಂದು ಒಪ್ಪಿಕೊಂಡಿರುವ ಜಿಲ್ಲಾಧಿಕಾರಿ ಅಕ್ರಂ ಪಾಷಾ ಮನವಿ ನಿರಾಕರಿಸಿ ಹಿಂಬರಹ ನೀಡಿ ಕಳುಹಿಸಲಾಗಿದೆ ಎಂದಿದ್ದಾರೆ. ರೈತರದ್ದಾಗಲಿ ಬೇರೆಯವರದ್ದಾಗಲಿ ಒಂದಿಂಚೂ ಭೂಮಿಯನ್ನು ನನ್ನ ಅಧಿಕಾರಾವಧಿಯಲ್ಲಿ ವಕ್ಫ್‌ಗೆ ನೀಡಿಲ್ಲ' ಎಂದೂ ಸ್ಪಷ್ಟಪಡಿಸಿದ್ದಾರೆ. 'ಜಮೀನುಗಳು ರೈತರ ಅನುಭವದಲ್ಲಿರುವುದರಿಂದ ಖಾತೆ ವರ್ಗಾವಣೆ ಮಾಡಲು ಆಗದು ಎಂದು ಆಯಾಯ ತಹಶೀಲ್ದಾರ್‌ಗಳು ಸೆಪ್ಟೆಂಬರ್‌ನಲ್ಲಿಯೇ ವಕ್ಫ್‌ಗೆ ಹಿಂಬರಹ ನೀಡಿದ್ದಾರೆ. ಮುದುವಾಡಿ ಸರ್ಕಾರಿ ಶಾಲೆಯದ್ದು ವಕ್ಫ್ ಜಾಗ. ಆದರೂ ಶಾಲೆಗೇ ಖಾತೆ ಮಾಡಿಕೊಡಲಾಗಿದೆ' ಎಂದಿದ್ದಾರೆ.

ಎಕರೆ, ಗೋಶಾಲೆಗೆ 9.36 ಎಕರೆ ಭೂಮಿ ಮಂಜೂರಾಗಿ ಆಗಿದೆ.

ಬಂಗಾರಪೇಟೆ ತಾಲ್ಲೂಕಿನಲ್ಲಿ ಇಂಧನ ಇಲಾಖೆಗೆ 4.21 ಎಕರೆ, ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ 1 ಎಕರೆ ಭೂಮಿ ಮಂಜೂರು ಮಾಡಿದ್ದಾರೆ.

ಗಣಪತಿ ದೇವಾಲಯದ 104ನೇ ವಾರ್ಷಿಕ ರಥೋತ್ಸವ

• ಉದಯವಾಹಿನಿ, ಕುಶಾಲನಗರ

ಪಟ್ಟಣದ ಐತಿಹಾಸಿಕ ಹಿನ್ನೆಲೆ ಹೊಂದಿರುವ ಗಣಪತಿ ದೇವಾಲಯದ 104ನೇ ವಾರ್ಷಿಕ ರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಮಹಾಗಣಪತಿ ದೇವಾಲಯ ಸೇವಾ ಸಮಿತಿಯಿಂದ ಕಾರ್ತೀಕ ಕೃಷ್ಣ ಪಕ್ಷದಲ್ಲಿ ಸಲ್ಲುವ ಅಭಿಜಿನ್ ಶುಭ ಲಗ್ನದಲ್ಲಿ ಮಧ್ಯಾಹ್ನ 1.30 ಗಂಟೆಗೆ ಗಣಪತಿ ವಿಗ್ರಹಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಥ ಬಲಿ ಮತ್ತು ಪೂಜೆ ಹಾಗೂ ಮಹಾಮಂಗಳಾರತಿ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ದೇವಾಲಯದ ಪ್ರಧಾನ ಅರ್ಚಕ ಆರ್.ಕೆ.ನಾಗೇಂದ್ರ ಬಾಬು ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯ ನಡೆಯಿತು. ಪಂಚಾಮೃತ ಅಭಿಷೇಕ, ಏಕವಾರ, ರುದ್ರಾಭಿಷೇಕ, ಪುಷ್ಪಾಲಂಕಾರ, ರಥಪೂಜೆ ಹಾಗೂ ರಥ ಬಲಿ ಕಾರ್ಯಕ್ರಮಗಳು ನಡೆದವು. ಬಳಿಕ, ದೇವರ ಉತ್ಸವಮೂರ್ತಿಯನ್ನು ಮಂಗಳವಾದ್ಯಗಳ ಜೊತೆಗೆ ದೇವಾಲಯದಿಂದ ಹೊರತಂದು ಭಕ್ತರ ಜಯಘೋಷಗಳ ಮಧ್ಯೆ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಬಂದಿದ್ದ ಸಹಸ್ರಾರು ಭಕ್ತರು ರಥವನ್ನು ಗಣಪತಿ ದೇವಾಲಯದಿಂದ ರಥ ಬೀದಿ ಮೂಲಕ ಆಂಜನೇಯ ದೇವಸ್ಥಾನದವರೆಗೆ ಎಳೆಯುವ ಮೂಲಕ

ಉದಯವಾಹಿನಿ ಚಿತ್ರ

ಹರಕೆ ಹೊತ್ತಿದ್ದ ಭಕ್ತರು ಸಾವಿರಾರು ಈಡುಗಾಯಿ ಹೊಡೆದು ಭಕ್ತಿ ಸಮರ್ಪಿಸಿದರು. ನವದಂಪತಿಗಳು ಹಾಗೂ ಹರಕೆ ಹೊತ್ತ ಅವಿವಾಹಿತರು ರಥಕ್ಕೆ ಹಣ್ಣು ಜವನ ಎಸೆದು ತಮ್ಮ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥನೆ ಸಲ್ಲಿಸಿದರು. ದೇವಾಲಯ ವ್ಯಾಪ್ತಿಯಲ್ಲಿ ಬಾಳೆಹಣ್ಣು, ಜವನ ಮಾರಾಟ ಜೋರಾಗಿತ್ತು.

ಭಕ್ತಿ ಸಮರ್ಪಿಸಿದರು. ಜೈ, ಜೈ ಗಣೇಶ ಎಂದು ಜಯಕಾರ ಹಾಕಿದರು. ಇದೇ ವೇಳೆ ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಗಣಪತಿ ದೇವಾಲಯದ ಎದುರು ರಸ್ತೆಯಲ್ಲಿ ಕರ್ಪೂರ ಹರಡಿ ಬೆಂಕಿ ಹಚ್ಚಿ ಪ್ರಾರ್ಥನೆ ಸಲ್ಲಿಸಿದರು. ಮಾಲಾಧಾರಿಗಳ ಲಯಬದ್ಧ ಭಜನೆ ಗಮನ ಸೆಳೆಯಿತು. ಭಕ್ತರು ರಥದ ಮುಂದೆ ಹಣ್ಣುಕಾಯಿ ಮಾಡಿಸಲು ಮುಗಿಬಿದ್ದರು.

ಲಾರಿಗೆ ಸಿಲುಕಿ ತುಂಡಾದ ವಿದ್ಯುತ್ ತಂತಿ: ತಪ್ಪಿದ ಭಾರಿ ಅನಾಹುತ

• ಉದಯವಾಹಿನಿ, ಕನಕಪುರ

ಟ್ಯಾಂಕರ್ ಲಾರಿಯ ಮೇಲ್ಭಾಗ ವಿದ್ಯುತ್ ತಂತಿಗೆ ತಗುಲಿ ತುಂಡಾಗಿದ್ದರಿಂದ ಕಂಬವೊಂದು ಮುರಿದು ಬಿದ್ದಿದ್ದು, ಉಳಿದ ಮೂರು ಕಂಬಗಳು ಬಾಗಿರುವ ಘಟನೆ ತಾಲ್ಲೂಕಿನ ಶಿವನಹಳ್ಳಿ ಗ್ರಾಮದಲ್ಲಿ ಮಂಗಳವಾರ ಸಂಜೆ ನಡೆದಿದೆ. ಘಟನೆಯಿಂದಾಗಿ ವಿದ್ಯುತ್ ಸಂಪರ್ಕ ಕಡಿತವಾಗಿದ್ದರಿಂದ ಭಾರಿ ಅನಾಹುತವೊಂದ ತಪ್ಪಿದೆ. ಗ್ರಾಮಕ್ಕೆ ಹೊಂದಿಕೊಂಡಂತಿರುವ ಹೆದ್ದಾರಿ-209ರಲ್ಲಿ ಹಲಗೂರು ಕಡೆಗೆ ತೆರಳುತ್ತಿದ್ದ ಭಾರಿ ಗಾತ್ರದ ಟ್ಯಾಂಕರ್ ಹೊತ್ತ ಲಾರಿಯು ರಸ್ತೆಯಲ್ಲಿ ಅಡ್ಡವಾಗಿ ಹಾಕಿದ್ದ ವಿದ್ಯುತ್ ಕಂಬಗಳ ತಂತಿಗಳಿಗೆ ತಾಗಿ ತುಂಡಾಗಿದೆ. ಅದನ್ನು ಗಮನಿಸದ ಲಾರಿ ಚಾಲಕ ಮುಂದೆ ಹೋಗಿದ್ದಾನೆ.

ವಿದ್ಯುತ್ ತಂತಿ ತುಂಡಾಗಿ ನೆಲಕ್ಕೆ ಬಿದ್ದ ಕೆಲವೇ ಕ್ಷಣಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ಘಟನೆಯನ್ನು ಗಮನಿಸಿದ ಸ್ಥಳೀಯರು ವಾಹನಗಳ ಸಂಚಾರವನ್ನು ಕೆಲ

ಉದಯವಾಹಿನಿ ಚಿತ್ರ

ಹೊತ್ತು ತಡೆದು, ಬೆಸ್ಕಾಂನವರಿಗೆ ಮಾಹಿತಿ ನೀಡಿದರು. ಘಟನೆಯಿಂದಾಗಿ ರಸ್ತೆಯಲ್ಲಿ ಸುಮಾರು 15 ನಿಮಿಷ ವಾಹನಗಳ ಸಂಚಾರ ಬಂದ್ ಆಯಿತು. ಆದರೂ, ವಿದ್ಯುತ್ ತಂತಿ ಗಮನಿಸದ ಬೈಕ್ ಸವಾರನೊಬ್ಬ ಬಂದು ಅಪಘಾತಕ್ಕೀಡಾಗಿ ಗಾಯಗೊಂಡ.

ಕೂಡಲೇ ಸ್ಥಳೀಯರು ಆತನನ್ನು ಆರೈಕೆ ಮಾಡಿ, ಆಸ್ಪತ್ರೆಗೆ ಕಳಿಸಿದರು. ನಂತರ ಸ್ಥಳಕ್ಕೆ ಬಂದ ಬೆಸ್ಕಾಂ ಸಿಬ್ಬಂದಿ, ವಿದ್ಯುತ್ ತಂತಿಗಳನ್ನು ತೆರವುಗೊಳಿಸಿ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಕೆಎಂಎಫ್‌ಗೆ ಸಂಬಂಧಿಸಿದ ಟ್ಯಾಂಕರ್

ಘಟನೆ ಬಳಿಕ ಚಾಲಕ ಲಾರಿ ಸಮೇತ ಪರಾರಿಯಾಗಿದ್ದಾನೆ. ಸದ್ಯ ಲಾರಿಯನ್ನು ಪತ್ತೆ ಹಚ್ಚಲಾಗಿದೆ. ಘಟನೆ ಕುರಿತು ಪೊಲೀಸ್ ದೂರು ಕೊಡುವ ಕುರಿತು, ಮೇಲಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಅನ್ನು ಲಾರಿಯಲ್ಲಿ ಸಾಗಿಸಲಾಗುತ್ತಿತ್ತು.

ವಿದ್ಯುತ್ ತಂತಿ ತುಂಡಾದ ರಭಸಕ್ಕೆ ವಿದ್ಯುತ್ ಪೂರೈಕೆ ಸ್ಥಗಿತವಾಗಿದೆ. ಒಂದು ವೇಳೆ ಸ್ಥಗಿತವಾಗದೆ ಇದ್ದಿದ್ದರೆ ಲಾರಿ ಸುಟ್ಟು ಭಸ್ಮವಾಗುತ್ತಿತ್ತು. ಅಲ್ಲದೆ, ಅದೇ ಮಾರ್ಗದಲ್ಲಿ ವಿದ್ಯುತ್ ತಂತಿ ಗಮನಿಸದೆ ಬರುತ್ತಿದ್ದ ಇತರ ವಾಹನಗಳು ಸಹ ಅಪಾಯಕ್ಕೆ ಸಿಲುಕಿ ಸಾವು-ನೋವು ಸಂಭವಿಸುತ್ತಿತ್ತು' ಎಂದು ಬೆಸ್ಕಾಂ ಸಿಬ್ಬಂದಿಯೊಬ್ಬರು ಹೇಳಿದರು.

ಹಿಂದೂಗಳ ದಮನಕ್ಕೆ ಮುಂದಾದ ಕಾಂಗ್ರೇಸ್: ಆರ್. ಅಶೋಕ್ ಆರೋಪ

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಮ್ಮ ಮನೆಯಲ್ಲಿ ನಾವೇ ಪರಕೀಯರಾಗಿದ್ದೇವೆ. ರಾಜ್ಯದಲ್ಲಿ ಬಹು ಸಂಖ್ಯಾಕ ಹಿಂದೂಗಳನ್ನು ದಮನ ಮಾಡಲು ರಾಜ್ಯ ಕಾಂಗ್ರೇಸ್ ಸರಕಾರ ಹೊರಟಿದ್ದು, ಬೆಳಗಾವಿ ಅಧಿವೇಶನದಲ್ಲಿ ವಕ್ಫ್ ರದ್ದತಿಗೆ ಆಗ್ರಹಿಸಿ ಅಧಿ ವೇಶನ ನಡೆಸಲು ಬಿಡದಂತೆ ಹೋರಾಟ ನಡೆಸಲಿದ್ದೇವೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ರಾಜ್ಯ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ನಗರದಲ್ಲಿ ರೈತರ ಜಮೀನುಗಳನ್ನು ರಾತೋರಾತ್ರಿ ವಕ್ಫ್ ಹೆಸರಿಗೆ ಮಂಜೂರು ಮಾಡಲಾಗುತ್ತಿದೆ ಎಂದು ಆರೋಪಿಸಿ ಬಿಜೆಪಿ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಪಾದಯಾತ್ರೆ ಸಂದರ್ಭ ಅವರು ಮಾತನಾಡಿದರು. ಅಹಿಂದ ಜಪ ಮಾಡುತ್ತಿದ್ದವರು ಇದೀಗ ಸಂಪೂರ್ಣವಾಗಿ ಹಿಂದ ಬಿಟ್ಟು ಅಲ್ಪಸಂಖ್ಯಾಕರನ್ನು ಉದ್ಧಾರ ಮಾಡಲು ಹೊರಟಿದ್ದಾರೆ. ಕಾಂಗ್ರೇಸ್ ನಾಯಕರು ಕರ್ನಾಟಕವನ್ನು ಪಾಕಿಸ್ಥಾನ ಮಾಡಲು ಹೊರಟಿದ್ದಾರೆ, ವಕ್ಫ್ ರದ್ದತಿ ಆಗಲೇಬೇಕು ಎಂದರು. ಯುಪಿಎ ಸರಕಾರ ವಕ್ಫ್‌ಗೆ ನ್ಯಾಯಾಂಗದ ಅಧಿಕಾರ ಕೊಟ್ಟಿದೆ. ಹಿಂದೂಗಳಿಗೆ ಒಂದು ಕಾನೂನು, ಮುಸ್ಲಿಮರಿಗೆ ಒಂದು ಕಾನೂನಾ ಎಂದು ಪ್ರಶ್ನಿಸಿದರು.

ಕಾಂಗ್ರೇಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿ ಶೂನ್ಯವಾಗಿದೆ ಎಂದರು. ಸಂಸದ ಡಾ, ಕೆ. ಸುಧಾಕರ್ ಮಾತನಾಡಿ, ಬಹುಸಂಖ್ಯಾಕ ಹಿಂದೂಗಳ ಮೇಲೆ ವಕ ಗದಾ ಪ್ರಹಾರ ಮಾಡುತ್ತಿದೆ ಎಂದರು.

ಮುಡಾ ಮಾಜಿ ಆಯುಕ್ತ ನಟೇಶ್ ವಿಚಾರಣೆ

• ಉದಯವಾಹಿನಿ, ಮೈಸೂರು

ಮುಡಾದಲ್ಲಿನ 50:50ರ ಅನುಪಾತದಲ್ಲಿನ ನಿವೇಶನ ಹಂಚಿಕೆ ಹಗರಣ ಹಾಗೂ ಸಿಎಂ ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ವಿಜಯನಗರದಲ್ಲಿ 14 ಬದಲಿ ನಿವೇಶನ ನಿಯಮ ಮೀರಿ ಹಂಚಿಕೆ ಮಾಡಿದ ಆರೋಪ ಸಂಬಂಧ ಸಂಬಂಧ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ಅವರನ್ನು ಮಂಗಳವಾರ 7 ಗಂಟೆಗೂ ಹೆಚ್ಚು ಕಾಲ ವಿಚಾರಣೆ ನಡೆಸಿದರು.

ಅಧಿಕಾರಿಗಳ ತಂಡವು ಹಲವು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯಿತು. ಪ್ರತಿಯೊಂದಕ್ಕೂ ನಟೇಶ್ ತಾವು ಕೈಗೊಂಡ ಕ್ರಮದ ಬಗ್ಗೆ ಲಿಖಿತ ದಾಖಲೆಗಳೊಂದಿಗೆ ಮಾಹಿತಿ ನೀಡಿದರು ಎನ್ನಲಾಗಿದೆ.

ಲೋಕಾಯುಕ್ತ ಕಚೇರಿಗೆ ಆಗಮಿಸಿದ ಸಂದರ್ಭ ನಟೇಶ್, ಮಾಧ್ಯಮ ಪ್ರತಿನಿಧಿಗಳನ್ನು ಕಂಡು ಸಿಡಿಮಿಡಿಗೊಂಡರು. ಮಾಧ್ಯಮ ಪ್ರತಿನಿಧಿಗಳು ಕೆಮರಾ ಹಿಡಿದು ಸುತ್ತುವರಿದಾಗ ನನ್ನನ್ನು ಯಾಕೆ ವೀಡಿಯೋಮಾಡುತ್ತಿದ್ದೀರಿ ನಾನೇನು ಡ್ಯಾನ್ಸ್ ಮಾಡುತ್ತಿದ್ದೇನಾ, ಕಾಮನ್ ಸೆನ್ಸ್ ಇಲ್ಲವಾ ಎಂದು ರೇಗಿದರು. ನನ್ನ ಅವಧಿಯಲ್ಲಿ

ಉದಯವಾಹಿನಿ ಚಿತ್ರ

ನನ್ನ ಅವಧಿ ಮುಗಿದ ಬಳಿಕ ಮುಂದೆ ಏನಾಗಿದೆಯೋ ಗೊತ್ತಿಲ್ಲ. ಬುಧ?ವಾರದ ವಿಚಾರಣೆಯಿಂದ ವಿನಾಯಿತಿ ನೀಡುವಂತೆ ಮನವಿ ಮಾಡಲು ಬಂದಿದ್ದೇನೆ ಎಂದರು.

ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಬದಲಿ ಭೂಮಿ ಕೊಡಲು ತೀರ್ಮಾನ ಮಾಡಲಾಗಿತ್ತು. ಆದರೆ ಅದಕ್ಕೆ ಸಿದ್ದರಾಮಯ್ಯ ಒಪ್ಪಿರಲಿಲ್ಲ ಎಂದು ಮುಡಾ ಮಾಜಿ ಅಧ್ಯಕ್ಷ ಡಿ. ಧ್ರುವಕುಮಾರ್ ಹೇಳಿದರು.

ಮೈಸೂರು ಲೋಕಾಯುಕ್ತ ಕಚೇರಿಗೆ ಮಂಗಳವಾರ ಭೇಟಿ ನೀಡಿದ್ದ ಅವರು ಮಾಧ್ಯಮದವರ ಜತೆ ಮಾತನಾಡಿ, ಸಿಎಂ ಪತ್ನಿಗೆ ಭೂಮಿ ಕೊಡುವ ಬಗ್ಗೆ, ನನ್ನ ಅವಧಿಯಲ್ಲಿ ಈ ವಿಚಾರ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಕಳೆದುಕೊಂಡ ಭೂಮಿಗೆ ಸಮಾನಂತರ ಬಡಾವಣೆಯಲ್ಲಿ ಭೂಮಿ ಕೊಡಲು ಸಭೆಯಲ್ಲಿ ತೀರ್ಮಾನ ಮಾಡಲಾಗಿತ್ತು.

ಈ ವಿಚಾರವನ್ನು ನಾನೇ ಖುದ್ದಾಗಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ವಿಷಯ ತಿಳಿಸಿದೆ. ನಾನು ಸಿಎಂ ಆಗಿರುವ ಸಮಯದಲ್ಲಿ ಈ ನಿರ್ಣಯಗಳು ಬೇಡ ಎಂದಿದ್ದರು ಎಂದು ಹೇಳಿದರು.

ಪ್ರತಿಭೆ ಅನಾವರಣಕ್ಕೆ ಕಾರಂಜಿ ವೇದಿಕೆ: ಪ್ರಾಂಶುಪಾಲ ಪ್ರಭುಸ್ವಾಮಿ

• ಉದಯವಾಹಿನಿ, ರಾಮನಗರ

ಶಿಕ್ಷಣ ಇಲಾಖೆಯ ಪ್ರತಿಭಾ ಕಾರಂಜಿ ಕಾರ್ಯಕ್ರಮವು ಶಾಲಾ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೊಂದು ವೇದಿಕೆ ಒದಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಕಾರ್ಯಕ್ರಮದ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಬೇಕು' ಎಂದು ಡಯಟ್‌ನ ಪದನಿಮಿತ್ತ ಉಪ ನಿರ್ದೇಶಕ ಹಾಗೂ ಪ್ರಾಂಶುಪಾಲ ಪ್ರಭುಸ್ವಾಮಿ ಸಲಹೆ ನೀಡಿದರು. ನಗರದ ಗುರುಭವನದಲ್ಲಿ ಜರುಗಿದ 2024-25ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿಭೆಗೆ ವೇದಿಕೆಯಾಗುವ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸಬೇಕು. ಇದರಿಂದ ಅವರಿಗಿರುವ ವೇದಿಕೆ ಭಯವು ಹೋಗಲಿದ್ದು, ಮುಂದೆ ತಮ್ಮ ಪ್ರತಿಭೆಯಲ್ಲೇ ಎತ್ತರಕ್ಕೆ ಬೆಳೆಯುವ ಅವಕಾಶ ಸಿಗುತ್ತದೆ' ಎಂದರು. ಮಕ್ಕಳು ಅತ್ಯಂತ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಖುಷಿ ತಂದಿದೆ. ಇದರ ಹಿಂದೆ ಅವರ ತಂದೆ-ತಾಯಿ ಶ್ರಮ ಇರುವುದನ್ನು ಅಲ್ಲಗಳೆಯುವಂತಿಲ್ಲ. ಜೊತೆಗೆ, ಶಿಕ್ಷಕರು ಸಹ ಅವರನ್ನು ಪ್ರೇರೇಪಿಸುವ ಮೂಲಕ ಅವರ ಪ್ರತಿಭ

ಅಂತರಾಳದಿಂದ... EDITORIAL

ಆನೆಗಳ ದುರ್ಬಳಕೆಗೆ ಬೇಕು ಅಂಕುಶ

ತಮಿಳುನಾಡಿನ ತಿರುಚೆಂದೂರ್ ಮುರುಗನ್ ದೇವಸ್ಥಾನಕ್ಕೆ ಸೇರಿದ ಆನೆಯೊಂದು ತನ್ನ ಮಾವುತ ಮತ್ತು ಆತನ ಸಂಬಂಧಿಯನ್ನು ಬರ್ಬರವಾಗಿ ತುಳಿದು ಕೊಂದಿದೆ. ಇದು ದೇವಸ್ಥಾನಕ್ಕೆ ಸೇರಿದ ಆನೆಯಾಗಿದ್ದು ಮಾವುತ 20 ವರ್ಷಗಳಿಂದ ಇದನ್ನು ನಿಯಂತ್ರಿಸುತ್ತಾ ಬಂದಿದ್ದ ಆದರೆ ಇಂದು ಅನೆ ಸಂಯಮ ಕಳೆದುಕೊಂಡು ಆತನನ್ನು ಮತ್ತು ಆತನ ಸಂಬಂಧಿಯನ್ನು ತುಳಿದು ಕೊಂದು, ಭಾರೀ ದಾಂಧಲೆಯನ್ನು ಎಸಗಿದೆ. ಮೇಲ್ನೋಟಕ್ಕೆ ಆನೆ ಖಳನಾಯಕನ ಸ್ಥಾನದಲ್ಲಿ ನಿಂತಿದೆ. ಆದರೆ ಕಾಡಿನಲ್ಲಿ ಸ್ವತಂತ್ರ ಬದುಕನ್ನು ಅನುಭವಿಸಬೇಕಾದ ಆನೆಯನ್ನು ತನ್ನ ವೈಯಕ್ತಿಕ ಹಿತಾಸಕ್ತಿಗಾಗಿ ದುರ್ಬಳಕೆ ಮಾಡುತ್ತಾ ಬರುವ ಮನುಷ್ಯನ ಪಾತ್ರವೂ ಈ ದುರಂತಗಳ ಹಿಂದೆ ಇದೆ ಎನ್ನುವುದನ್ನು ನಾವು ಮರೆಯಬಾರದು, ಆನೆ-ಮನುಷ್ಯನ ನಡುವಿನ ಸಂಘರ್ಷಕ್ಕೆ ಸುದೀರ್ಘ ಇತಿಹಾಸವಿದೆ. ಅರಣ್ಯ ಪ್ರದೇಶ ಕೃಷಿ ಭೂಮಿಯಾಗಿ ಪರಿವರ್ತನೆಯಾದ ದಿನದಿಂದ ಈ ಸಂಘರ್ಷಗಳು ತೀವ್ರ ಸ್ವರೂಪವನ್ನು ಪಡೆದಿವೆ. ಕರ್ನಾಟಕದಲ್ಲೂ ರೈತರ ಕೃಷಿ ಭೂಮಿಯ ಮೇಲೆ ಆನೆಗಳು ನಡೆಸುವ ದಾಳಿ, ದಾಂಧಲೆಗಳು, ಜೀವಹಾನಿಗಳು ಮಾಧ್ಯಮಗಳಲ್ಲಿ ಆಗಾಗ ಸುದ್ದಿಯಾಗುತ್ತಿರುತ್ತವೆ. ಆಗಲೂ ಖಳನ ಸ್ಥಾನದಲ್ಲಿ ಆನೆಯನ್ನೇ ನಿಲ್ಲಿಸುತ್ತೇವೆ. ಮನುಷ್ಯ ಇಲ್ಲಿ ಸಂತ್ರಸ್ತ

ಇತ್ತೀಚೆಗಷ್ಟೇ ದಿಲ್ಲಿ ಹೈಕೋರ್ಟ್ ಹಬ್ಬಗಳ ಹೆಸರಿನಲ್ಲಿ ಪಟಾಕಿಗಳನ್ನು ಸುಡುವುದು ಸರಿಯಲ್ಲ ಎಂದು ಸ್ಪಷ್ಟ ಧ್ವನಿಯಲ್ಲಿ ಹೇಳಿತ್ತು. ಯಾವುದೇ ಧರ್ಮ ಪರಿಸರ ಮಾಲಿನ್ಯವನ್ನು ಪ್ರೋತ್ಸಾಹಿಸುವುದಿಲ್ಲ ಹಬ್ಬದ ಹೆಸರಿನಲ್ಲಿ ಪಟಾಕಿಗಳನ್ನು ಸುಟ್ಟು ಮಾಲಿನ್ಯವನ್ನು ಸೃಷ್ಟಿಸುವುದು ಹಬ್ಬದ ಮೌಲ್ಯಗಳಿಗೆ ಕುಂದುಂಟು ಮಾಡಿದಂತಾಗುತ್ತದೆ ಎಂದು ಸುಪ್ರೀಂಕೋರ್ಟ್ ಎಚ್ಚರಿಸಿತ್ತು. ಇದರ ಬೆನ್ನಿಗೇ ಕೇರಳ ಹೈಕೋರ್ಟ್ ಆನೆಗಳ ದುರ್ಬಳಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಉದಯವಾಹಿನಿ ಚಿತ್ರ

ಮೊದಲು ಮನುಷ್ಯ ಆನೆಗಳ ವಾಸಸ್ಥಾನದ ಮೇಲೆ ದಾಳಿ ಮಾಡಿ ಅವುಗಳನ್ನು ಅರಣ್ಯದಿಂದ ದೂರ ಓಡಿಸಿದ. ಅವುಗಳು ಅರಾಮವಾಗಿ ಬದುಕುತ್ತಿದ್ದ ಕಾಡನ್ನು ವಶಕ್ಕೆ ತೆಗೆದುಕೊಂಡು ಅವುಗಳನ್ನು ಕೃಷಿ ಭೂಮಿಯಾಗಿ ಪರಿವರ್ತಿಸಿದ. ದಾರಿ ತಪ್ಪಿದ ಆನೆಗಳು ಮತ್ತೆ ತಮ್ಮ ಹಳೆಯ ಕಾದನ್ನು ಹುಡುಕುತ್ತಾ ಬಂದಾಗ ಮನುಷ್ಯ-ಆನೆಗಳ ನಡುವೆ ಸಂಘರ್ಷಗಳು ನಡೆಯುತ್ತವೆ. ಕಾಡುಗಳು ಕಡಿಮೆಯಾದಂತೆಲ್ಲ ಆನೆಗಳು ಎಲ್ಲಿಗೆ ಹೋಗಬೇಕು? ಒಂದೆಡೆ ಕಾಡುಗಳ್ಳರು, ಮಗದೊಂದೆಡೆ ಅರಣ್ಯ ಭೂಮಿಯ ಇಳಿಕೆ, ವಿದ್ಯುತ್ ಬೇಲಿಗಳು, ಕಾಡುಗಳ ಸಮೀಪದಲ್ಲೇ ಹಾದು ಹೋಗುವ ರೈಲು ಹಳಿಗಳು ಹೀಗೆ ಆನೆಗಳನ್ನು ಬಲಿತೆಗೆದುಕೊಳ್ಳಲು ನೂರಾರು ಖೆಡ್ಡಾಗಳು ಆಧುನಿಕ ದಿನಗಳಲ್ಲಿ ನಿರ್ಮಾಣವಾಗಿವೆ. ಇವೆಲ್ಲದರ ಪರಿಣಾಮವಾಗಿ ಆನೆಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿವೆ. ಹೀಗೆ ಇಳಿಕೆಯಾಗುತ್ತಾ ಹೋದರೆ, ಆನೆಗಳಿಗೂ ಡೈನೋಸಾರ್‌ಗಳ ಸ್ಥಿತಿ ಒದಗಬಹುದು ಎಂದು ಇತ್ತೀಚೆಗೆ ಕೇರಳ ಹೈಕೋರ್ಟ್ ಕಳವಳ ವ್ಯಕ್ತಪಡಿಸಿತ್ತು ಇಂತಹ ಸಂದರ್ಭದಲ್ಲಿ ಧರ್ಮದ ಹೆಸರಿನಲ್ಲಿ ಆಚರಣೆಗಳ ಹೆಸರಿನಲ್ಲಿ ಆನೆಗಳನ್ನು ಬಳಸಿಕೊಳ್ಳುವುದು ಎಷ್ಟು ಸರಿ ಎನ್ನುವುದು ಚರ್ಚೆಗೆ ಬರಬೇಕಾಗಿದೆ.

'ಯಾವುದೇ ಹಬ್ಬಗಳಲ್ಲಿ ಆನೆ ಬಳಸುವುದನ್ನು ಯಾವ ಧರ್ಮವೂ ಕಡ್ಡಾಯಗೊಳಿಸಿಲ್ಲ' ಎಂದು ಅದು ಹೇಳಿದೆ ಹಬ್ಬಗಳಲ್ಲಿ ಬಳಸುವುದಕ್ಕಾಗಿ ದೇವಸ್ಥಾನಗಳಲ್ಲಿ ಆನೆಗಳನ್ನು ಸಾಕುವುದನ್ನು ಅದು ಕಟು ಶಬ್ದಗಳಲ್ಲಿ ಖಂಡಿಸಿದೆ.ಸಾಕುವ ಹೆಸರಿನಲ್ಲಿ ಆನೆಗಳಿಗೆ ಚಿತ್ರ ಹಿಂಸೆ ನೀಡುವುದನ್ನು ನಾಝಿ ನಿರ್ನಾಮ ಶಿಬಿರಗಳಿಗೆ ಕೋರ್ಟ್ ಹೋಲಿಸಿದೆ. ಪ್ರಾಣಿಗಳ ಹಕ್ಕುಗಳ ರಕ್ಷಣೆಯಲ್ಲಿ ಸರಕಾರದ ನಿಷ್ಕ್ರಿಯತೆಗೆ ಸಂಬಂಧಿಸಿದ ಸ್ವಯಂ ಪ್ರೇರಿತ ಅರ್ಜಿ ವಿಚಾರಣೆಯ ಸಂದರ್ಭದಲ್ಲಿ ಮಾತನಾಡಿದ ಹೈಕೋರ್ಟ್ ವಿಭಾಗೀಯ ಪೀಠ, ಕಳೆದ ಏಳು ವರ್ಷಗಳಲ್ಲಿ ಕೇರಳ ರಾಜ್ಯದಲ್ಲಿ ಸೆರೆಯಲ್ಲಿದ್ದ ಶೇ. 33ರಷ್ಟು ಆನೆಗಳು ಸಾವನ್ನಪ್ಪಿವೆ ಎಂದು ಕಳವಳ ವ್ಯಕ್ತಪಡಿಸಿವೆ.

ಮನುಷ್ಯ ತನ್ನ ಬದುಕನ್ನು ಸುಗಮವಾಗಿಸುವ ಪ್ರಯತ್ನದಲ್ಲಿ ಆನೆಗಳನ್ನು ಬಲಿಕೊಡುತ್ತಲೇ ಬರುತ್ತಿದ್ದಾನೆ. ಒಂದೆಡೆ ಆನೆಗಳ ನಿವಾಸವಾಗಿರುವ ಅರಣ್ಯಗಳನ್ನು ಒತ್ತುವರಿ ಮಾಡಿ ಅದನ್ನು ಕೃಷಿ ಭೂಮಿಯಾಗಿ ಬದಲಾಯಿಸಿ ಅವುಗಳ ಆಶ್ರಯ ಕಿತ್ತುಕೊಂಡಿದ್ದಾನೆ. ಇನ್ನೊಂದೆಡೆ ಬೃಹತ್ ಕಾಮಗಾರಿಗಳ ಸಂದರ್ಭದಲ್ಲಿ ಆನೆಗಳನ್ನು ಪಳಗಿಸಿ ಅದಕ್ಕಾಗಿ ಬಳಸುತ್ತಾ ಬಂದಿದ್ದಾನೆ. ಇಷ್ಟೆಲ್ಲ ಮಾಡಿದ ಬಳಿಕವೂ ಆತ ಸುಮ್ಮನಾಗಿಲ್ಲ. ತನ್ನ ಹಬ್ಬ ಆಚರಣೆ ಮನರಂಜನೆಗಾಗಿಯೂ ಆನೆಗಳನ್ನು ದುರ್ಬಳಕೆ ಮಾಡುತ್ತಿದ್ದಾನೆ. ಆನೆ ಜನವಸತಿ ಪ್ರದೇಶದಲ್ಲಿ ಸಾಕುವಂತಹ ಪ್ರಾಣಿ ಅಲ್ಲ ಅದನ್ನಷ್ಟೇ ಪಳಗಿಸಿದರೂ, ಯಾವತ್ತಾದರೂ ಅದು ಹುಚ್ಚೆದ್ದು ಬಿಟ್ಟರೆ ಅಪಾರ ಸಾವುನೋವುಗಳಿಗೆ ಕಾರಣವಾಗಿ ಬಿಡಬಹುದು. ಕೇರಳ, ತಮಿಳುನಾಡು, ಕರ್ನಾಟಕದಲ್ಲಿ ಈ ಹಿಂದೆಯೂ ಆನೆಗಳು ದೇವಸ್ಥಾನದಲ್ಲಿ ಉತ್ಸವಗಳಲ್ಲಿ ದಾಂಧಲೆಗಳನ್ನು ಮಾಡಿರುವ ಉದಾಹರಣೆಗಳಿವೆ.

ಕರ್ನಾಟಕದ ನಾಡಹಬ್ಬವಾಗಿರುವ ದಸರಾದಲ್ಲಿ ಜಂಬೂ ಸವಾರಿ'ಯನ್ನು ನೋಡಲು ಸಹಸ್ರಾರು ಜನರು ನೆರೆಯುತ್ತಾರೆ. ಜಂಬೂ ಸವಾರಿಗೆ ಆನೆಗಳನ್ನು ಬಳಸುವ ಬಗ್ಗೆ ಈಗಾಗಲೇ ಹಲವು ಸಾಮಾಜಿಕ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ. ಒಂದು ವೇಳೆ ಸಾವಿರಾರು ಜನರು ನೆರೆದಿರುವ ದಸರಾದಲ್ಲಿ ಆಕಸ್ಮಿಕವಾಗಿ ಆನೆಯೊಂದು ಮದವೇರಿ ದಾಂಧಲೆ ಎಸಗಿದರೆ ಸಂಭವಿಸುವ ಕಾಲ್ತುಳಿತಕ್ಕೆ ನೂರಾರು ಜನರು ಬಲಿಯಾಗಬಹುದು. ಹೀಗಿರುವಾಗ, ಇಂತಹ ಉತ್ಸವಗಳಲ್ಲಿ ಆನೆಗಳನ್ನು ಬಳಸುವುದಕ್ಕೆ ಪ್ರೋತ್ಸಾಹ ನೀಡುವುದು ಎಷ್ಟು ಸರಿ ಹಲವು ಉತ್ಸವಗಳಲ್ಲಿ ಪಟಾಕಿಗಳು ಎಸಗಿರುವ ಹಾನಿಗಳನ್ನು ನಾತ, ನಷ್ಟಗಳನ್ನು ನಾವು ನೋಡಿದ್ದೇವೆ. ಹಾಗೆ ನೋಡಿದರೆ ಉತ್ಸವಗಳಲ್ಲಿ ಆನೆಗಳನ್ನು ಬಳಸುವುದು ಕೂಡ ಪಟಾಕಿ ಸ್ಫೋಟಕಗಳನ್ನು

• ಹಿಂದಿನ ಸಂಚಿಕೆಯಿಂದ 26 ನೆಯ ಅಧ್ಯಾಯ

ಹೋದರೆಂದು ಕೇಳಿದನು ಆ ದಿಗ್ಗಜವು ನೀನು ಕೃತಾರ್ಥನೆಂದೂ ಅಶ್ವಮೇಧಾಂಗವಾದ ಕುದುರೆಯನ್ನು ಕಂಡು ಅದರ ಸಹಿತ ಶೀಘ್ರದಲ್ಲಿ ಬರುವೆಯೆಂದೂ ನುಡಿದು ಸನ್ಮಾನವನ್ನು ಮಾಡಿ ಕಳುಹಿಸಿತು. ಆಸಂತರ ಮುಂದಕ್ಕೆ ಹೋಗಿ ಮಿಕ್ಕ ದಿಗ್ಗಜಗಳನ್ನೂ ಕಂಡು ಯಥಾಕ್ರಮದಲ್ಲಿ ತನ್ನ ತಂದೆಯ ಸೋದರರ ವೃತ್ತಾಂತವನ್ನೂ ಯಾಗದ ಕುದುರೆಯ ವರ್ತಮಾನವನ್ನೂ ಕೇಳಲು, ಆ ದಿಗ್ಗಜಗಳು ಸನ್ಮಾನವನ್ನು ಮಾಡಿ ತನ್ನ ಮುತ್ತಯ್ಯನ ಅಶ್ವಮೇಧಾಂಗದ ಕುದುರೆಯ ಸಹಿತ ಅವನು ಶೀಘ್ರದಲ್ಲಿ ಬರುವನೆಂದು ಹೇಳಿದುವು ಆಮೇಲೆ ಈಶಾನ್ಯ ದಿಕ್ಕಿಗೆ ಹೋಗಿ ಅಲ್ಲಿ ತನ್ನ ಚಿಕ್ಕವ್ವಂದಿರಾದ ಸಗರಚಕ್ರವರ್ತಿಯ ಅರುವತ್ತು ಸಾವಿರ ಮಕ್ಕಳೂ ಕಪಿಲಮಹಾಮುನೀಶ್ವರನ ಕೋಪಾಗ್ನಿಯಿಂದ ದಗ್ಧರಾಗಿ ಭಸ್ಮರಾರಿಯಾಗಿರು ವುದನ್ನು ಕಂಡು, ಬಹುದುಃಖದಿಂದ ಹಂಬಲಿಸುತ್ತ ಆ ಸ್ಥಳದಲ್ಲಿ ಸಂಚರಿಸುತ್ತಿದ್ದ ಕುದುರೆಯನ್ನು ಕಂಡು ಶೋಕಾಕ್ರಾಂತನಾದನು ಮೃತರಾದ ತನ್ನ ಚಿಕ್ಕಪ್ಪಂದಿರಿಗೆ ಸಂಸ್ಕಾರವನ್ನು ಮಾಡಬೇಕೆಂದು ಉದಕವನ್ನು ವಿಚಾರಿಸಿ ಎಲ್ಲಿಯೂ ಕಾಣದೆ ಅಂತರಿಕ್ಷಮಾರ್ಗವನ್ನು ನೋಡಲಾಗಿ ದೈವಾಧೀನದಿಂದ ಅಲ್ಲಿ ತನ್ನ ಸೋದರಮಾವನಾದ ಗರುಮ್ಮಂತನನ್ನು ಕಂಡನು ಗರುತ್ಮಂತನು ಅಂಶುಮಂತನನ್ನು ನೋಡಿ ಎಲೈ ಅಂಶುಮಂತನೆ, ಇದರ ವಧೆಯು ಸರ್ವಲೋಕಕ್ಕೂ ಹಿತಕರವಾದದ್ದು ಆದಕಾರಣ ನೀನು ದುಃಖಪಡಬೇಡ. ಸಗರಚಕ್ರವರ್ತಿಯ ಮಕ್ಕಳು ಮಹಾಮಹಿಮೆಯುಳ್ಳ ಕಪಿಲಮಹಾಮುನಿಯ ಕೋಪಾಗ್ನಿಯಿಂದ ದಗ್ಧರಾದರು ದುರ್ಮರಣದಲ್ಲಿ ಹೋದವರಿಗೆ ಲೌಕಿಕಜಲದಿಂದ ಉತ್ತರಕ್ರಿಯೆ ಗಳನ್ನು ಮಾಡಬಾರದೆಂಬ ಆಚಾರವುಂಟು. ಆದ್ದರಿಂದ ನೀನು ನಿನ್ನ ಚಿಕ್ಕಪ್ಪಂದಿರಿಗೆ ಸಂಸ್ಕಾರವನ್ನು ಮಾಡಬೇಡ. ಹಿಮವತ್ಪರ್ವತನ ಜೇಷ್ಠ ಪುತ್ರಿಯಾದ ಗಂಗೆಯಲ್ಲಿ ತೀರ್ಥಸ್ನಾನವನ್ನು ಮಾಡಿಸು ಆ ದೇವಿಯು ಈ ಭಸ್ಮರಾಶಿಯಾದವರನ್ನು ಪವಿತ್ರಮಾಡುವಳು ಪವಿತ್ರವಾದ ಗಂಗೆಯಿಂದ ಸಗರಚಕ್ರವರ್ತಿಯ ಅರುವತ್ತು ಸಾವಿರ ದುಕ್ಕಳೂ ಸ್ವರ್ಗವನ್ನೆ ದುವರು. ಗಂಗೆಯು ಸ್ವರ್ಗಲೋಕ ದಲ್ಲಿದ್ದಾಳೆ. ಆಕೆಯನ್ನು ಭೂಲೋಕಕ್ಕೆ ಕರೆದುಕೊಂಡು ಬಂದರೆ ಆಕೆಯು ಅರುವತ್ತು ಸಾವಿರ ಮಂದಿ ಸಗರ ಚಕ್ರವರ್ತಿಯ ಮಕ್ಕಳನ್ನೂ ಸ್ವರ್ಗವನ್ನೇದಿಸುವಳು ನೀನು ಈ ಕುದುರೆಯನ್ನು ಹಿಡಿದುಕೊಂಡು ಹೋಗಿ ನಿನ್ನ ಮುತ್ತಯ್ಯನಾದ ಸಗರ ಚಕ್ರವರ್ತಿಯ ಅಶ್ವಮೇಧಯಾಗವನ್ನು ನೆರವೇರಿಸು' ಎಂದು ಹೇಳಿದನು ಆ ಮಾತನ್ನು ಕೇಳಿ ಮಹಾಪರಾಕ್ರಮಿಯಾದ ಅಂಶುಮಂತನು ದೀಕ್ಷಿತನಾಗಿದ್ದ ಸಗರ ಚಕ್ರವರ್ತಿಯ ಸಮೀಪಕ್ಕೆ ಕುದುರೆಯೊಡನೆ ಬಂದು ಅದನ್ನು ಒಪ್ಪಿಸಿ ತನ್ನ ಚಿಕ್ಕಪ್ಪಂದಿರ ವೃತ್ತಾಂತ ವನ್ನು ಹೇಳಿದನು.

ಮುಂದುವರಿಯುವುದು...

ಹಾಲಿನ ಪ್ಯಾಕೆಟ್‌ನಿಂದ 1 ಕೆಜಿಗಿಂತ ಹೆಚ್ಚು ಬೆಣ್ಣೆ ತೆಗೆಯಬಹುದು

ಚಪಾತಿ, ಪರೋಟಾ, ಇತರ ಸಿಹಿತಿಂಡಿಗಳನ್ನ ತಯಾರಿಸುವಾಗ ಬೆಣ್ಣೆಯನ್ನ ಬಳಸುವುದು ಸಾಮಾನ್ಯ

• ಉದಯವಾಹಿನಿ, ಬೆಂಗಳೂರು

ಬೆಳಿಗ್ಗೆ ಉಪಾಹಾರಕ್ಕಾಗಿ ವಿವಿಧ ಭಕ್ಷ್ಯಗಳನ್ನ ತಯಾರಿಸಲು ನಾವು ಬೆಣ್ಣೆಯನ್ನ ಬಳಸುತ್ತೇವೆ. ಬೆಣ್ಣೆಯನ್ನ ಸಾಮಾನ್ಯವಾಗಿ ಅಂಗಡಿಯಿಂದ ಖರೀದಿಸಿ ಬಳಸಲಾಗುತ್ತದೆ. ಆದಾಗ್ಯೂ, ನೀವು ಮನೆಯಲ್ಲಿ ಹಾಲು ಹಸುಗಳನ್ನ ಹೊಂದಿದ್ದರೆ, ನೀವು ಮನೆಯಲ್ಲಿ ಬೆಣ್ಣೆಯನ್ನ ತಯಾರಿಸಬಹುದು. ಒಂದು ಸಣ್ಣ ಬೆಣ್ಣೆ ಪೆಟ್ಟಿಗೆಯ ಬೆಲೆ ನೂರಾರು ರೂಪಾಯಿಗಳು ಗಳಿಸಬಹುದು. ಚಪಾತಿ, ಪರೋಟಾ ಮತ್ತು ಇತರ ಸಿಹಿತಿಂಡಿಗಳನ್ನ ತಯಾರಿಸುವಾಗ ಬೆಣ್ಣೆಯನ್ನ ಬಳಸುವುದು ಸಾಮಾನ್ಯವಾಗಿದೆ. ಮನೆಯಲ್ಲಿ ಬೆಣ್ಣೆಯನ್ನ ಹೇಗೆ ತಯಾರಿಸಬೇಕೆಂದು ನಮಗೆ ತಿಳಿದಿದೆ. ಆದ್ರೆ, ನಾವು ಹಾಲಿನ ಪ್ಯಾಕೆಟ್'ಗಳಿಂದ ಬೆಣ್ಣೆಯನ್ನ ಸಹ ಹೊರತೆಗೆಯಬಹುದು ಅನ್ನೋದು ತಿಳಿದಿದ್ಯಾ..?

ಹೌದು, ನಾವು ಅಂಗಡಿಯಿಂದ ಖರೀದಿಸುವ ಪ್ಯಾಕೆಟ್ ಹಾಲಿನಿಂದ ಬೆಣ್ಣೆಯನ್ನ ಸಹ ತೆಗೆಯಬಹುದು ಅಂದ್ರೆ ಅಚ್ಚರಿಯಾಗ್ಬೋದು. ಯಾಕಂದ್ರೆ, ಈ ಹಾಲನ್ನು ಅನೇಕ ರೀತಿಯಲ್ಲಿ ಪಾಶ್ಚರೀಕರಿಸಲಾಗುತ್ತದೆ. ಹೀಗಾಗಿ ಪಾಶ್ಚರೀಕರಿಸಿದ ಹಾಲನ್ನು ಬೆಣ್ಣೆಯಾಗಿಯೂ ತಯಾರಿಸಬಹುದು. ಆದ್ದರಿಂದ

ಉದಯವಾಹಿನಿ ಚಿತ್ರ

ಈ ಟ್ರಿಕ್ಸ್ ಅನುಸರಿಸಿ!

ಹಾಲಿನ ಪ್ಯಾಕೆಟ್'ನಿಂದ ಬೆಣ್ಣೆಯನ್ನ ಹೊರತೆಗೆಯುವುದು ಹೇಗೆ.? ಎಂದು ತಿಳಿಯೋಣ. ನಾವು ಯಾವ ರೀತಿಯ ಹಾಲನ್ನು ಬಳಸುತ್ತೇವೆ ಎಂದು ಮೊದಲು ನೋಡೋಣ. ಬೆಣ್ಣೆಯನ್ನ ಕೆನೆಯುಕ್ತ ಹಾಲಿನಿಂದ ತಯಾರಿಸಬಹುದು, ಆದ್ದರಿಂದ 1 ಲೀಟರ್ ನಂದಿನಿ ಶುಭಂ ಹಾಲನ್ನ ಬಳಸುವುದು ಉತ್ತಮ.

ಸರಳವಾಗಿ ಹೇಳುವುದಾದರೆ, ನೀಲಿ ಪ್ಯಾಕೆಟ್'ಗಿಂತ ಕೆಂಪು ಪ್ಯಾಕೆಟ್ ಬಳಸುವುದು ಉತ್ತಮ. ಈ ಹಾಲು ಸ್ವಲ್ಪ ಗಟ್ಟಿಯಾಗಿರುತ್ತದೆ. ಮೊದಲಿಗೆ, ಒಂದು ಬಟ್ಟಲಿನಲ್ಲಿ ಒಂದು ಲೀಟರ್ ಹಾಲಿನ ಪ್ಯಾಕೆಟ್ ಸೇರಿಸಿ ಮತ್ತು ನೀರು ಸೇರಿಸದೆ ಕುದಿಸಿ. ಕುದಿಯುವಾಗ ಜ್ವಾಲೆಯನ್ನ ಎತ್ತರದಲ್ಲಿಡಿ. ಹಾಲು ಕುದಿಯಲು ಬಿಡಬೇಡಿ.

ಈ ಹಾಲನ್ನ ಚೆನ್ನಾಗಿ ಕುದಿಸಬೇಕು. ಕೊನೆಯ 5 ನಿಮಿಷಗಳ ಕಾಲ ಸಣ್ಣ ಉರಿಯಲ್ಲಿ ಕುದಿಯಲು ಬಿಡಿ. ನಂತರ ಒಲೆಯನ್ನ ಆಫ್ ಮಾಡಿ ಮತ್ತು ಹಾಲನ್ನ ತಣ್ಣಗಾಗಿಡಿ. ನಂತ್ರ ಅದನ್ನು ತಣ್ಣಗಾಗಿಸಿ ಮತ್ತು ಮುಚ್ಚಳವನ್ನು ಫ್ರಿಜ್'ನಲ್ಲಿ ಇರಿಸಿ ಮತ್ತು ಮುಕ್ಕಾಲು ಭಾಗ ಮುಚ್ಚಿಡಿ. ಅದನ್ನು ಇರಿಸಿದ ನಂತರ, ನಿಮಗೆ ಬೇಕಾದಾಗ ಹಾಲನ್ನು ನಿಧಾನವಾಗಿ ಮತ್ತೊಂದು ಲೋಟಕ್ಕೆ ವಾಲಿಸಬೇಕು. ಮರುದಿನ, ಈ ಹಾಲಿನ ಪಾತ್ರೆಯಲ್ಲಿ ಕೆನೆ ದಪ್ಪವಾಗುತ್ತದೆ. ಅದನ್ನ ಪೆಟ್ಟಿಗೆಯಲ್ಲಿ ಸಂಗ್ರಹಿಸಬೇಡಿ.

ಕ್ಯಾನ್ ಮುಚ್ಚಳವನ್ನ ಮುಚ್ಚಿ ಮತ್ತು ಕ್ರೀಮ್'ನ್ನ ಫ್ರಿಜ್'ನಲ್ಲಿ ಸಂಗ್ರಹಿಸಿ. ಒಂದು ವಾರದವರೆಗೆ ನಿರಂತರವಾಗಿ ಸಂಗ್ರಹಿಸಿದರೆ,ಅ ಕ್ರೀಮ್ ದಪ್ಪವಾಗುತ್ತದೆ ಮತ್ತು ದೊಡ್ಡ ಉಂಡೆಯಾಗಿ ಬದಲಾಗುತ್ತದೆ. ಈಗ ಒಂದು ಬಟ್ಟಲನ್ನು ತೆಗೆದುಕೊಂಡು ಸಣ್ಣ ಬಟ್ಟಲಿನಲ್ಲಿ ಮೊಸರನ್ನ ಹಾಕಿ. ನಂತ್ರ ಎಲ್ಲಾ ಕ್ರೀಮ್ ತೆಗೆದು ಅದನ್ನು ಬಟ್ಟಲಿನಲ್ಲಿ ಹಾಕಿ ಮತ್ತು ಒಂದು ಗಂಟೆ ಕಾಲ ಬಿಡಿ.

ಬೆಣ್ಣೆ ನಿಧಾನವಾಗಿ ಬರಲು ಪ್ರಾರಂಭ

ಈಗ ಸ್ವಲ್ಪ ನೀರನ್ನ ತೆಗೆದುಕೊಂಡು ಕ್ರೀಮ್ ಹೊಂದಿರುವ ಪಾತ್ರೆಯಲ್ಲಿ ನೀರನ್ನು ಸೇರಿಸಿ ಮಿಶ್ರಣ ಮಾಡಿ. ಕ್ರೀಮ್ ಮುಚ್ಚಲು ಸಾಕಷ್ಟು ನೀರನ್ನ ಸೇರಿಸಿ. ಚೆನ್ನಾಗಿ ಮಿಶ್ರಣ ಮಾಡಿ. ಬಟರ್ ಸ್ಟಿಕ್ ಅಥವಾ ಸ್ಟೀಲ್ ವಿಸ್ಕ್ ಬಳಸಿ ಮಿಶ್ರಣವನ್ನು ಮುಂದುವರಿಸಿ. ಮಿಶ್ರಣವು 15 ನಿಮಿಷಗಳಿಗಿಂತ ಹೆಚ್ಚು ಕಾಲ ಇದ್ದರೆ, ಐಸ್ ಕ್ರೀಮ್ ತರಹದ ವಿನ್ಯಾಸವು ಮೊದಲು ಕಾಣಿಸಿಕೊಳ್ಳುತ್ತದೆ. ಇದರ ನಂತರ, ಸ್ವಲ್ಪ ಸಮಯದವರೆಗೆ ಕಲಕುವುದರಿಂದ ಬೆಣ್ಣೆ ನಿಧಾನವಾಗಿ ಬರಲು ಪ್ರಾರಂಭಿಸುತ್ತದೆ. ನಂತರ ನಿಮ್ಮ ಕೈಗಳನ್ನು ನೆನೆಸಿ, ನಿಧಾನವಾಗಿ ಬೆಣ್ಣೆಯನ್ನ ತೆಗೆದುಕೊಂಡು ತಣ್ಣೀರಿನಲ್ಲಿ ಹಾಕಿ. ಹೆಚ್ಚು ಕ್ರೀಮ್ ಖಂಡಿತವಾಗಿಯೂ ಹೆಚ್ಚು ಬೆಣ್ಣೆಗೆ ಕಾರಣವಾಗುತ್ತದೆ. ನೀವು ಅದನ್ನು ಪ್ರಯತ್ನಿಸಿ, ಈ ಬೆಣ್ಣೆಯ ನಂತರ ತುಪ್ಪವನ್ನ ತಯಾರಿಸಿ ಆನಂದಿಸಿ.

ಅಂಬಾಬಾಯಿ ಕನ್ನಡದ ಅನರ್ಘ್ಯ ಮುತ್ತು; ಸತ್ಯವತಿ

• ಉದಯವಾಹಿನಿ, ಬೆಂಗಳೂರು

ಯಾಜಿ ಪ್ರಕಾಶನದಿಂದ ಹರಿದಾಸ ಮಹಿಳೆ ಅಂಬಾಬಾಯಿ ವಿರಚಿತ 'ಏಕಾಂಗಿ ಕವಯತ್ರಿಯ ಪ್ರವಾಸದ ಡೈರಿ' (1938) ಪುಸ್ತಕ ಲೋಕಾರ್ಪಣಾ ಕಾರ್ಯಕ್ರಮವು 2024 ನ. 19 ಮಂಗಳವಾರದಂದು ನಗರದ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ನಲ್ಲಿ ನಡೆಯಿತು.

ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ವೈದ್ಯ, ಫಟ್ ಅಂತ ಹೇಳಿ' ಖ್ಯಾತಿಯ ಲೇಖಕ ಡಾ.ನಾ. ಸೋಮೇಶ್ವರ, ಪ್ರತಿಯೊಂದು ಜೀವಿ ಕೂಡ ತನ್ನ ಅಸ್ತಿತ್ವದ ಉಳಿವಿಗೆ ಪ್ರತಿನಿತ್ಯ ಹೋರಾಟಮಾಡುತ್ತದೆ. ಇದನ್ನು ಬಹಳ ಸ್ಪಷ್ಟವಾಗಿ ನಾವು ಮನುಷ್ಯರಲ್ಲಿ ಕಾಣಬಹುದು. ಸತಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ರಾಜಾರಾಂ ಮೋಹನ ರಾಯ್ ಅವರು ತಮ್ಮ ಕುಟುಂಬದ ಜತೆಗೆ ಹೋರಾಟ ನಡೆಸಿದ್ದರು. ಅಗ ಅವರಿಗೆ ಸತಿ ಪದ್ಧತಿಯ ಹಿಂದೆ ಯಾವುದೇ ರೀತಿಯ ದೈವಿಕ ಪರಿಕಲ್ಪನೆಯಿಲ್ಲ ಎಂಬ ಸೂಕ್ಷ್ಮ ಅವರಿಗೆ ಅರಿವಾಗುತ್ತದೆ.

ಯಾವ ಧರ್ಮ ಕೂಡ ನೀನು ಸತಿ ಪದ್ಧತಿಗೆ ಒಳಪಟ್ಟರೆ ನೇರವಾಗಿ ಸ್ವರ್ಗಕ್ಕೆ ಹೋಗಬಹುದು ಎಂದು ಹೇಳುವುದಿಲ್ಲ. ಇದೆಲ್ಲವೂ ಕೂಡ ಜನರ ಪರಿಕಲ್ಪನೆ ಎನ್ನುತ್ತಾ ಮಾನವ ಜನಾಂಗದ ಬೆಳವಣಿಗೆ, ವಿಕಾಸ, ಉದಯವನ್ನು ವಿವರಿಸಿದರು, ಕಾರ್ಯಕ್ರಮದ

ರೈತರು ಬೆಳೆದ ಕಬ್ಬು, ಯಂತ್ರಗಳ ಮೂಲಕ ಕಟಾವು ಕಾರ್ಯ ಚುರುಕು

ಜಿಲ್ಲಾಡಳಿತವು ವಲಯವಾರು ಸಮೀಪವಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಕಟಾವು ಮಾಡಿಕೊಂಡು ಹೋಗುವಂತೆ ನಿರ್ದೇಶನ

ಉದಯವಾಹಿನಿ ವಿಶೇಷ ವರದಿ

- ಮಹೇಬೂಬಶಾ ಅಣವಾರ
- ಉದಯವಾಹಿನಿ, ಚಿಂಚೋಳಿ

ಕಬ್ಬು ಕಟಾವು ಕಾರ್ಯ ಚುರುಕು

ತಾಲ್ಲೂಕಿನಲ್ಲಿ ಸಿದ್ದಸಿರಿ ಎಥೆನಾಲ್ ಪವರ್ ಘಟಕ ಕಾರ್ಖಾನೆಗೆ ನಂಬಿಕೊಂಡು ರೈತರು ಬೆಳೆದ ಕಬ್ಬು ಬೆಳೆಗಾರರು ಕಬ್ಬು ಕಟಾವು ಮಾಡಿಕೊಂಡು ಯಾರು ತೆಗೆದುಕೊಂಡು ಹೋಗುತ್ತಾರೆ ಎಂಬುವ ಸಮಸ್ಯೆಯ ಸುಳಿಯಲ್ಲಿ ಸುಲುಕಿದ ರೈತರಿಗೆ ಜಿಲ್ಲಾಡಳಿತ ನಿರ್ದೇಶನ ಮೇರೆಗೆ ಆಯಾ ವಲಯವಾರು ಕಬ್ಬು ರವಾನಿಸಲು ಆದೇಶ ಹೊರಡಿಸಲಾಗಿತ್ತು ಕಾರ್ಖಾನೆಗಳು ಕಬ್ಬು ಖರೀದಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತಿರುವ ಹಿನ್ನಲೆಯಲ್ಲಿ ಕಬ್ಬು ಕಟಾವಿಗೆ ಬಂದ ಹಿನ್ನಲೆಯಲ್ಲಿ ರೈತರು ಖಾಸಗಿಯವರಿಗೆ ಕಬ್ಬು ಕಟಾವಿಗೆ ನೀಡಿದ್ದು ಖಾಸಗಿಯವರು ಕಬ್ಬು ಖರೀದಿಸಿ ಕಬ್ಬು ಕಟಾವು ಕಾರ್ಯ ಚುರುಕುಗೊಂಡಿರುವುದರಿಂದ ರೈತರು ಬೆಳೆದ ಕಬ್ಬು ಬೆಳೆಗಾರರ ಕಬ್ಬು ಕಟಾವು ಕಾರ್ಯ ಚುರುಕುಗೊಂಡಿದೆ.

ತಾಲ್ಲೂಕಿನ ಹೊರವಲಯದಲ್ಲಿರುವ ಸಿದ್ದಸಿರಿ ಕಾರ್ಖಾನೆಯು ಕಾರಣಾಂತರಗಳಿಂದ ಬಂದ್ ಆಗಿರುವುದರಿಂದ ರೈತರು ಕಂಗಾಲಾಗಿದ್ದು ರೈತರು ಬೆಳೆದ ಕಬ್ಬು ಕಟಾವಿಗೆ ಬಹಳಷ್ಟು ತೊಂದರೆ ಸಿಲುಕಿರುವುದರಿಂದ ಸಿದ್ದಸಿರಿ ಕಾರ್ಖಾನೆ ಪ್ರಾರಂಭಿಸುವಂತೆ ಚಿಂಚೋಳಿ ತಾಲ್ಲೂಕಿನ ರೈತರು ಸೇರಿದಂತೆ ಸುತ್ತಮುತ್ತಲಿನ ತಾಲ್ಲೂಕುಗಳ ರೈತರು ರಾಜಕೀಯ ಮುಖಂಡರು ಸೇರಿದಂತೆ ಕಾರ್ಖಾನೆ ಪುನಃ ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಬೇಕು ರೈತರ ನೆರವಿಗೆ ಧಾವಿಸಬೇಕು ಎಂದು ಎಡ್ಮೂರು ಬಾರಿ ತಾಲ್ಲೂಕಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು, ತದನಂತರ ಕಳೆದ 07 ದಿನಗಳಿಂದ ಧರಣಿ ಸತ್ಯಾಗ್ರಹ 08 ದಿನಗಳಿಂದ ಉಪವಾಸ ಸತ್ಯಾಗ್ರಹ ರೈತರು ಕುಳಿತುಕೊಂಡಿದ್ದಾರೆ ಇದನ್ನು ಗಮನಿಸಿದ ಜಿಲ್ಲಾಡಳಿತ ಮತ್ತು ಸರ್ಕಾರದ ಸಚಿವರುಗಳು ಅವರ ಪಕ್ಷಗಳ ಮುಖಂಡರಿಗೆ ಧರಣಿ ಸತ್ಯಾಗ್ರಹಕ್ಕೆ ಕಳುಹಿಸಿ ಧರಣಿ ಹಿಂಪಡೆಯುವಂತೆ ಮನವೋಲಿಸಿದರು ಸಹ ಧರಣಿ ಹಿಂಪಡೆಯದೆ ಹಾಗೆ ಕುಳಿತಿರುವುದರಿಂದ ಸಚಿವರು ಸರ್ಕಾರದ ಆದೇಶದ ಮೇರೆಗೆ ಜಿಲ್ಲಾಡಳಿತವು ವಲಯವಾರು ಸಮೀಪವಿರುವ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಕಟಾವು ಮಾಡಿಕೊಂಡು ಹೋಗುವಂತೆ ನಿರ್ದೇಶನ ನೀಡಿ ಆದೇಶ ಪತ್ರದೊಂದಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಧರಣಿ ಸತ್ಯಾಗ್ರಹಕ್ಕೆ ಆಗಮಿಸಿ ರೈತರಿಗೆ ಆದೇಶಪತ್ರ ನೀಡಿ ಧರಣಿ ಹಿಂಪಡೆಯುವಂತೆ ಮನವೋಲಿಸಿದರು ಪ್ರತಿಭಟನಾಕಾರರು ಜಗ್ಗದೆ ನಮಗೆ ರೈತರ ಕಬ್ಬು ಸಾಗಾಟ ಮಾಡುವುದು ಬೇಡ ಸಿದ್ಧಸಿರಿ ಕಾರ್ಖಾನೆ ಪ್ರಾರಂಭಿಸಲು ಅನುಮತಿ ನೀಡಬೇಕು ಎಂದು ಪ್ರತಿಭಟನಾಕಾರರು ಪಟ್ಟುಹಿಡಿದರು ಆಗ ಹೆಚ್ಚುವರಿ ಜಿಲ್ಲಾಧಿಕಾರಿ ಕಾರ್ಖಾನೆ ಕಾನೂನು ತೊಡಕು

ಉದಯವಾಹಿನಿ ಚಿತ್ರ

ಈಗಾಗಲೇ ನಮ್ಮ ಜಮೀನಿನಲ್ಲಿ ಕಬ್ಬು ಬೆಳೆದಿದ್ದೇನೆ ಕಾರ್ಖಾನೆ ಸ್ಥಗಿತದಿಂದ ಸ್ವಲ್ಪ ಬೇಸರವಿತ್ತು ಆದರೆ ರೈತರಿಗೆ ಯಾರೆ ಕಬ್ಬು ಸಾಗಾಟ ಮಾಡಿಕೊಂಡು ಹೋಗಲಿ ರೈತರಿಗೆ ಸಮಯಕ್ಕೆ ತಕ್ಕಂತೆ ಕಬ್ಬು ರವಾನಿಸಿಕೊಂಡು ಸಮಯಕ್ಕೆ ಕಬ್ಬಿನ ಹಣ ಪಾವತಿ ಮಾಡಿದರೆ ಸಾಕು ನಮಗೆ ಕಬ್ಬು ಕಟಾವು ಮಾಡಿಕೊಂಡು ಹೋದರೆ ಸಾಕಾಗಿದೆ ಈಗಾಗಲೇ ನೇರೆಯ ತೇಲಂಗಾಣ ರಾಜ್ಯದವರು ರೈತರು ಬೆಳೆದ ಕಬ್ಬು ಕಟಾವು ಮಾಡಿಕೊಂಡು ಹೋಗುತ್ತಿದ್ದಾರೆ.

– ಮಲ್ಲಿಕಾರ್ಜುನ ಬುಶೇಟ್ಟಿ
ಪ್ರಗತಿಪರ ರೈತ ಚಿಂಚೋಳಿ

ನ್ಯಾಯಾಲಯದಲ್ಲಿ ಇರುವುದರಿಂದ ಕಾರ್ಖಾನೆ ಬಗ್ಗೆ ಹೇಳಲು ಸಾಧ್ಯವಿಲ್ಲ ಬದಲಾಗಿ ಪರ್ಯಾಯವಾಗಿ ರೈತರು ಬೆಳೆದ ಕಬ್ಬು ತಾತ್ಕಾಲಿಕ ಕಟಾವು ಮಾಡಿಕೊಂಡು ಹೋಗುವಂತೆ ಆಯಾ ಕಾರ್ಖಾನೆಗಳಿಗೆ ಆದೇಶ ನೀಡಲಾಗಿದೆ ಧರಣಿ ಹಿಂಪಡೆಯುವಂತೆ ಹೇಳಿದರು ಪ್ರತಿಭಟನಾಕಾರರು ಜಗ್ಗದೆ ಹಾಗೇನೇ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಮತ್ತೊಂದೆಡೆ ತೆಲಂಗಾಣ ರಾಜ್ಯದಿಂದ ಖಾಸಗಿಯವರು ಯಂತ್ರಗಳ ಮೂಲಕ ತಾಲ್ಲೂಕಿನಲ್ಲಿ ಆಗಮಿಸಿ ರೈತರು ಬೆಳೆದ ಕಬ್ಬು ಕಟಾವು ಮಾಡುತ್ತಿರುವುದು ರೈತರು ಬೆಳೆದ ಕಬ್ಬು ಕಟಾವು ಆದರೆ ಸಾಕು ಎಂಬುವ ಸ್ಥಿತಿಯಲ್ಲಿ ರೈತರಿದ್ದಾರೆ ಹಾಗಾಗಿ ರೈತರ ಬೆಳೆದ ಕಬ್ಬು ಕಟಾವು ಮಾಡಿಕೊಂಡು ಹೋಗುತ್ತಿರುವುದು ಎಲ್ಲೇಡೆ ಕಾಣಬಹುದು. ಬಿಜೆಪಿ ಪಕ್ಷದವರು ಹೇಳುವುದು ಸಿದ್ಧಸಿರಿ ಕಾರ್ಖಾನೆ ಬಂದ್ ಆಗಲು ಕಾಂಗ್ರೇಸ್ ಪಕ್ಷದವರು ಎಂದು ಆರೋಪ ಮಾಡುತ್ತಿದ್ದರೆ ಮತ್ತೊಂದೆಡೆ ಕಾಂಗ್ರೇಸ್ ಪಕ್ಷದವರು ಹೇಳುತ್ತಾರೆ ಕಾರ್ಖಾನೆ ಬಂದ್ ಮಾಡಲು ನಮ್ಮ ಪಕ್ಷ ಮಾಡಿಲ್ಲ ಸಿದ್ಧಸಿರಿ ಕಾರ್ಖಾನೆ ಪ್ರಾರಂಭಿಸಲು ಬೇಕಾಗುವ ದಾಖಲಾತಿಗಳು ಇಲ್ಲದಿರುವುದರಿಂದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಬಂದ್ ಮಾಡಿದ್ದಾರೆ ಕಾಂಗ್ರೇಸ್ ಪಕ್ಷಯಿಲ್ಲ, ಸರಿಯಾದ ದಾಖಲೆಗಳು ಇಲ್ಲವೆಂದು ಬಿಜೆಪಿ ಪಕ್ಷದ ಕೇಂದ್ರ ಸರ್ಕಾರವೇ 1.50ಕೋಟಿ ರೂ.ದಂಡ ವಿಧಿಸಿದೆ ಎಂದು ಕಾಂಗ್ರೇಸ್ ಪಕ್ಷದವರು ಬಿಜೆಪಿ ಮೇಲೆ ಪ್ರತ್ಯಾರೋಪ ಮಾಡುತ್ತಿದ್ದಾರೆ, ಇಬ್ಬರಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಚಿಂಚೋಳಿಯಲ್ಲಿ ಅನೇಕ ರೈತರು ಕಬ್ಬು ಬೆಳೆಯನ್ನು ಬೆಳೆದು ಕಟಾವಿಗೆ ಬಂದಿದ್ದು, ಕಾರ್ಖಾನೆಗೆ ಸಾಗಿಸುವುದು ಚಿಂತೆಯಾಗಿತ್ತು, ಇದನ್ನೇ ಅಸ್ತ್ರವಾಗಿಸಿಕೊಂಡು ಕೆಲವು ಜನ ರಾಜಕೀಯ ಲಾಭ ಪಡೆಯಲು ಸರಕಾರದ ಮೇಲೆ ಹಾಗೂ ಕಾಂಗ್ರೇಸ್ ಪಕ್ಷದ ಮೇಲೆ ಗೂಬೆ ಕೂರಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದರೆ ವಿನಃ ರೈತರ ಕಬ್ಬು ಕಟಾವು ಸಮಸ್ಯೆಗೆ ಸ್ಪಂದಿಸುವ ಪ್ರಾಮಾಣಿಕ ಪ್ರಯತ್ನ ಮಾಡದೆ ರೈತರಲ್ಲಿ ಆತಂಕ ಹುಟ್ಟಿಸುವ ಕೆಲಸ ಮಾಡಿದ್ದಾರೆ. ರೈತರ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಚಿಂಚೋಳಿ ಕಾಂಗ್ರೇಸ್ ಮುಖಂಡರು ಜಿಲ್ಲಾಧಿಕಾರಿಗಳ ಹಾಗೂ ಹಲವು ಕಾರ್ಖಾನೆ ಆಡಳಿತ ಮಂಡಳಿಯೊಂದಿಗೆ ನಿರಂತರ ಚರ್ಚಿಸಿ ಕೂಡಲೇ ಕಬ್ಬನ್ನು ಕಟಾವು ಮಾಡಿ ರೈತರಿಗೆ ಅನುಕೂಲ ಮಾಡುವ ಕೆಲಸ ಮಾಡಿದ್ದೇವೆ, ಈಗಾಗಲೇ ಕಬ್ಬು ಕಟಾವು ಆಗಿ ಕಾರ್ಖಾನೆಗಳಿಗೆ ತಲುಪುತಿದೆ, ತಾಲ್ಲೂಕಿನ ಎಲ್ಲಾ ಗ್ರಾಮಗಳ ಕಬ್ಬನ್ನು ಕಟಾವು ಮಾಡಿ ಕಾರ್ಖಾನೆಗೆ ಸಾಗಿಸುವಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ, ಯಾವತ್ತೂ ಕಾಂಗ್ರೇಸ್ ಪಕ್ಷ ರೈತರೊಂದಿಗೆಯಿದೆ, ಯಾವ ರೈತರು ಆತಂಕ ಪಡುವ ಅಗತ್ಯವಿಲ್ಲ ಎಲ್ಲೋರ ಕಬ್ಬು ಕಟಾವು ಆಗಲಿದೆ – ಶರಣುಪಾಟೀಲ ಮೋತಕಪಳ್ಳಿ, ಕಾಂಗ್ರೇಸ್ ವಕ್ತಾರರು ವಕೀಲರು ಚಿಂಚೋಳಿ

ರಿಂಗ್ ರಸ್ತೆ ಸಂಪೂರ್ಣಗೊಳಿಸಲು 'ಧೂಡಾ' ಯತ್ನ

- ಉದಯವಾಹಿನಿ, ದಾವಣಗೆರೆ

ನಗರದ ಹೊರವರ್ತುಲ (ರಿಂಗ್) ರಸ್ತೆ ಪೂರ್ಣಗೊಳಿಸುವ ಪ್ರಯತ್ನಕ್ಕೆ ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ (ಧೂಡಾ) ಮುಂದಾಗಿದ್ದು, 2 ಕೋಟಿ ವೆಚ್ಚದಲ್ಲಿ ಕಚ್ಚಾ ರಸ್ತೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ. ವಾಹನ ಸಂಚಾರ ಯೋಗ್ಯ ಮಾರ್ಗ ಮೂರು ತಿಂಗಳಲ್ಲಿ ಸಿದ್ಧವಾಗುವ ನಿರೀಕ್ಷೆ ಇದೆ. ಬಸಾಪುರ ಮಾರ್ಗವಾಗಿ ಬೇತೂರು ಹಾಗೂ ಪಿ.ಬಿ.ರಸ್ತೆ ಸಂಪರ್ಕಿಸುವ 6 ಕಿ.ಮೀ ಉದ್ದದ ರಿಂಗ್ ರಸ್ತೆ ನಿರ್ಮಾಣಕ್ಕೆ 120 ಕೋಟಿಯ ಯೋಜನೆ ಸಿದ್ಧಪಡಿಸಿದೆ. ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನಗರದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ರಿಂಗ್ ರಸ್ತೆ ಪೂರ್ಣಗೊಳಿಸುವ ಅಗತ್ಯವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದೆ.

ರಾಷ್ಟ್ರೀಯ ಹೆದ್ದಾರಿ –48ರ ಶಾಮನೂರು ಸಮೀಪದಿಂದ ಅಖ್ತರ್ ರಜಾ ವೃತ್ತದವರೆಗೆ ರಿಂಗ್ ರಸ್ತೆ ನಿರ್ಮಾಣವಾಗಿ ಬಹುದಿನ ಕಳೆದಿದೆ. ಮಾಗನಹಳ್ಳಿ ರಸ್ತೆ ವರೆಗೆ ಹೊರವರ್ತುಲ ರಸ್ತೆ ವಿಸ್ತರಿಸುವ ಪ್ರಯತ್ನಕ್ಕೆ ಇದ್ದ ಅಡತಡೆಗಳು ಈಗ ನಿವಾರಣೆಯಾಗಿವೆ. ಬೇತೂರು ರಸ್ತೆಯಿಂದ ಪಿ.ಬಿ.ರಸ್ತೆಯವರೆಗೆ ಬಾಕಿ ಉಳಿದಿರುವ ರಿಂಗ್ ರಸ್ತೆ ನಿರ್ಮಿಸಿದರೆ ಉದ್ದೇಶಿತ ಹೊರವರ್ತುಲ ರಸ್ತೆ ಪೂರ್ಣಗೊಳ್ಳಲಿದೆ. ಈ ನಿಟ್ಟಿನಲ್ಲಿ 'ಧೂಡಾ' ಕೈಗೊಂಡಿರುವ ನಿರ್ಧಾರ ಜನರಲ್ಲಿ ಆಶಾಭಾವನೆ ಮೂಡಿಸಿದೆ.

ಉದಯವಾಹಿನಿ ಚಿತ್ರ

ಸಂಚಾರ ದಟ್ಟಣೆಯ ಸಮಸ್ಯೆ

ಹೊರವರ್ತುಲ ರಸ್ತೆ ನಿರ್ಮಾಣ ಪೂರ್ಣಗೊಳ್ಳದಿರುವ ಕಾರಣಕ್ಕೆ ಜಗಳೂರು ಹಾಗೂ ಹರಪನಹಳ್ಳಿ ಮಾರ್ಗವಾಗಿ ಸಂಚರಿಸುವ ವಾಹನಗಳಿಗೆ ತೊಂದರೆ ಉಂಟಾಗುತ್ತಿದೆ. ಈ ಮಾರ್ಗದಿಂದ ಬರುವ ವಾಹನಗಳು ನಗರ ಪ್ರವೇಶಿಸಿ ಮುಂದಕ್ಕೆ ಸಾಗಬೇಕಿದೆ. ಇದರಿಂದ ನಗರದಲ್ಲಿ ಸಂಚಾರ ದಟ್ಟಣೆಯ ಸಮಸ್ಯೆ ಸೃಷ್ಟಿಯಾಗುತ್ತಿದೆ. ಇದಕ್ಕೆ ಪರಿಹಾರೋಪಾಯ ಕಂಡುಕೊಳ್ಳುವ ಉದ್ದೇಶದಿಂದ ಹೊರವರ್ತುಲ ರಸ್ತೆಯ ರೂಪುರೇಷ ಸಿದ್ಧಪಡಿಸಿದರೂ ಇದು ಪೂರ್ಣಗೊಂಡಿರಲಿಲ್ಲ.

ಸಾರ್ವಜನಿಕರ ಅಹವಾಲು ಆಲಿಸಿದ ಸಚಿವ ಡಿ.ಸುಧಾಕರ್

- ಉದಯವಾಹಿನಿ ಹಿರಿಯೂರು

ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅವರು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು.

ಓದಲು, ಬರೆಯಲು ಬಾರದ ಹಲವರು ಇತರರಿಂದ ಅರ್ಜಿಗಳನ್ನು ಬರೆಸಿಕೊಂಡು ಬಂದು ಸಚಿವರಿಗೆ ನೀಡಿ ಅಳಲು ತೋಡಿಕೊಂಡರು. ಈ ಪೈಕಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಪತಿಗೆ ಮೂತ್ರಪಿಂಡದ ಶಸ್ತ್ರಚಿಕಿತ್ಸೆ ಮಾಡಿಸಬೇಕಿದೆ' ಎಂದು ರೋಜಾ ಅವರು ಮನವಿ ಮಾಡಿದರೆ, ಹರಿಶ್ಚಂದ್ರಘಾಟ್ ಬಡಾವಣೆಯ ತಿಪ್ಪಮ್ಮ, 'ಸರ್ ನನ್ನ ಬಳಿ ಮೊಬೈಲ್ ಇಲ್. ಆದಕಾರಣ ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಸಲು ಆಗಿಲ್ಲ' ಎಂದು ಬೇಸರ ತೋಡಿಕೊಂಡರು. ಶಾಲೆಯಲ್ಲಿ ಮಕ್ಕಳು ಪ್ರವಾಸ ಹೊರಟಿದ್ದಾರೆ. ನನ್ನ ಬಳಿ ಹಣವಿಲ್ಲದ ಕಾರಣ ಮಗಳನ್ನು ಕಳುಹಿಸಲು ಆಗಲಿಲ್ಲ. ಮನೆಯಲ್ಲಿ ಕೂತು ಅಳುತ್ತಿದ್ದಾಳೆ' ಎಂದು


ಉದಯವಾಹಿನಿ ಚಿತ್ರ

ಕಮಲಮ್ಮ ಅಳಲು ತೋಡಿಕೊಂಡರು. ಮತ್ತೆ ಕೆಲವರು ಬಿಪಿಎಲ್ ಕಾರ್ಡ್ ರದ್ದಾಗಿರುವ ಕುರಿತು, ಮತ್ತೆ ಕೆಲವರು ನಿವೇಶನ ಬೇಕು, ಮನೆ ಮಂಜೂರು ಮಾಡಿಸಿ, ಮದುವೆಗೆ ಸಹಾಯ ಮಾಡಿ ಎಂದು ಅರ್ಜಿ ಹಿಡಿದು ಬಂದಿದ್ದರು.

ಪತಿಗೆ ಚಿಕಿತ್ಸೆ ಕೊಡಿಸುವಂತೆ ರೋಜಾ ಅವರಿಗೆ 5,000, ಮೊಬೈಲ್ ಖರೀದಿಸಲು ತಿಪ್ಪಮ್ಮನಿಗೆ 5,000 ವನ್ನು ಸಚಿವರು ನೀಡಿದರು. ಮಗಳನ್ನು ಪ್ರವಾಸಕ್ಕೆ ಕಳುಹಿಸುವಂತೆ ಕಮಲಮ್ಮನಿಗೂ ಹಣ ನೀಡಿದರು. ವಸತಿರಹಿತರ ಪಟ್ಟಿಯಲ್ಲಿದ್ದರೆ ನಿವೇಶನ, ವಸತಿ ಯೋಜನೆ ಅಡಿ ಮನೆ ನಿರ್ಮಿಸಿಕೊಡುವ ಭರವಸೆ ನೀಡಿದರು.

ಆರೋಗ್ಯದ ಸಮಸ್ಯೆ ಇರುವವರು ಹಿರಿಯೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಇಲ್ಲಿ ಆಗದಿದ್ದರೆ ಆಂಬುಲೆನ್ಸ್ ಮೂಲಕ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಕೊಡಿಸುವ ವ್ಯವಸ್ಥೆ ಮಾಡಲಾಗುವುದು. ಬಿಪಿಎಲ್ ಕಾರ್ಡ್ ಹೊಂದಿರುವವರು ಬೆಂಗಳೂರು ಹಾಗೂ ವಿವಿಧೆಡೆಯ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದಾಗಿದೆ. ಸಾಲ ಮಾಡಿ ಮದುವೆ ಮಾಡುವ ಬದಲು ಸರಳವಾಗಿ ಮದುವೆ ಮಾಡಿ ವಧು–ವರರನ್ನು ಆಶೀರ್ವದಿಸಿ. ದುಡಿಯುವ ಹಣದಲ್ಲಿ ಅಲ್ಪಭಾಗವನ್ನು ಆಸ್ಪತ್ರೆ, ಮಕ್ಕಳ ಶಿಕ್ಷಣ, ಮದುವೆಯಂತಹ ಖರ್ಚುಗಳಿಗೆ ಉಳಿಸಿ ಎಂದು ಸುಧಾಕರ್ ಸಲಹೆ ನೀಡಿದರು.

ವಕ್ಫ್ ಗೋಂದಲ: ಶ್ರೀರಾಮಸೇನೆಯಿಂದ ಸಹಾಯವಾಣಿ

- ಉದಯವಾಹಿನಿ, ಮಂಗಳೂರು

ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನೋಂದಣಿಯಾಗಿ ಗೊಂದಲ ಎದುರಿಸುತ್ತಿರುವ ರೈತರಿಗೆ, ಸಂತ್ರಸ್ತರಿಗೆ ನೆರವಾಗಲು ಶ್ರೀರಾಮ ಸೇನೆ ಸಹಾಯವಾಣಿಯನ್ನು ಆರಂಭಿಸಿದೆ. ಇದನ್ನು ಇಲ್ಲಿ ಬುಧವಾರ ಬಿಡುಗಡೆ ಮಾಡಲಾಯಿತು.

ಧಾರವಾಡ ಹಾಗೂ ಕಲಬುರ್ಗಿಯ ಹೈಕೋರ್ಟ್ ಪೀಠಗಳಲ್ಲಿ ನಮ್ಮ ಸಂಘಟನೆಯ ವಕೀಲರ ತಂಡ ಸಜ್ಜಾಗಿದೆ. ಸಂತ್ರಸ್ತರಿಗೆ ನಾವು ಉಚಿತ ಕಾನೂನು ನೆರವು ಒದಗಿಸಲಿದ್ದೇವೆ' ಎಂದರು.

ಕೇವಲ ರೈತರದು ಮಾತ್ರವಲ್ಲ, ಕೆಲವೆಡೆ ಮಠ ಮಂದಿರ, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪೊಲೀಸ್ ವರಿಷ್ಠರ ಕಚೇರಿಗಳನ್ನೂ ವಕ್ಫ್ ಆಸ್ತಿ ಎಂದು ತೋರಿಸಲಾಗುತ್ತಿದೆ. ಈ ಬಗ್ಗೆ ಮಠಾಧೀಶರು ಧ್ವನಿ ಎತ್ತಬೇಕು. ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯವರೂ ಪ್ರತಿಭಟಿಸಬೇಕು. ನಮ್ಮ ಆಸ್ತಿಯ ಬಗ್ಗೆ ತಕರಾರಿಲ್ಲ ಎಂದು ಸುಮ್ಮನೆ ಕುಳಿತುಕೊಳ್ಳಬಾರದು. ವಕ್ಫ್ ಆಸ್ತಿ ಕುರಿತ ಕಾಯ್ದೆಗೆ ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಯನ್ನು ಎಲ್ಲರೂ ಬೆಂಬಲ ಸೂಚಿಸಬೇಕು' ಎಂದರು.

ಉದಯವಾಹಿನಿ ಚಿತ್ರ

ಸಾಕಷ್ಟು ವಕ್ಫ್ ಆಸ್ತಿಗಳಿದ್ದರೂ ಸರ್ಕಾರ 328 ಖಬರ್‌ಸ್ತಾನಗಳಿಗೆ ಜಾಗ ಒದಗಿಸಿದೆ. ಇದು ಕೂಡಾ ಕಾನೂನು ಬಾಹಿರ' ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀರಾಮ ಸೇನೆಯ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಆನಂದ ಶೆಟ್ಟಿ ಅಡ್ಯಾರ್, ವಿಭಾಗ ಅಧ್ಯಕ್ಷ ಮಧುಸೂದನ ಉರ್ವಸ್ಟೋರ್ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷ ಅರುಣ್ ಕದ್ರಿ ಭಾಗವಹಿಸಿದ್ದರು.

ಜೇನು ಹುಳು ಕಡಿದು ಗಾಯಗೊಂಡಿದ್ದ ವೃದ್ಧೆ ಸಾವು

- ಉದಯವಾಹಿನಿ ಹಾವೇರಿ

ಜೇನು ಹುಳು ಕಡಿದು ತೀವ್ರ ಗಾಯಗೊಂಡಿದ್ದ ನಿಂಗವ್ವ ಯಲ್ಲವ್ವ ಶಿರಬಡಗಿ (65) ಅವರು ಹುಬ್ಬಳ್ಳಿ ಕಿಮ್ಸ್‌ನಲ್ಲಿ ಮೃತಪಟ್ಟಿದ್ದಾರೆ. ಶಿಗ್ಗಾವಿ ತಾಲ್ಲೂಕಿನ ಸಿಂಗಾಪೂರ ಗ್ರಾಮದ ನಿವಾಸಿ ನಿಂಗವ್ವ ಅವರು ನ. 13ರಂದು ಚೆಂಡು ಹೂವು ಬಿಡಿಸಲು ಹೊಲಕ್ಕೆ ಹೋಗಿದ್ದರು. ಅದೇ ಸಂದರ್ಭದಲ್ಲಿ ಅವರಿಗೆ ಜೇನು ಹುಳುಗಳು ಕಡಿದಿದ್ದವು.

ತೀವ್ರ ಗಾಯಗೊಂಡು ಅಸ್ವಸ್ಥಗೊಂಡಿದ್ದ ನಿಂಗವ್ವ ಅವರನ್ನು ಶಿಗ್ಗಾವಿ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಲಾಗಿತ್ತು.

ಜೇನು ಹುಳು ಕಡಿದು ನಿಂಗವ್ವ ಮೃತಪಟ್ಟಿದ್ದಾರೆ. ಸಾವಿನಲ್ಲಿ ಬೇರೆ ಯಾವುದೇ ಸಂಶಯ ಇಲ್ಲವೆಂದು ಕುಟುಂಬಸ್ಥರು ದೂರು ನೀಡಿದ್ದಾರೆ.

ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಬಂಕಾಪುರ ಪೊಲೀಸರು ತಿಳಿಸಿದರು.

ಹುಟ್ಟೂರಿನಲ್ಲಿ ನಕ್ಸಲ್ ನಾಯಕನ ಅಂತ್ಯ ಸಂಸ್ಕಾರ

ಉದಯವಾಹಿನಿ ಚಿತ್ರ

- ಉದಯವಾಹಿನಿ ಉಡುಪಿ

ಪೀತಬೈಲ್‌ನಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದ ನಕ್ಸಲ್ ನಾಯಕ ವಿಕ್ರಂ ಗೌಡನ ಅಂತ್ಯ ಸಂಸ್ಕಾರ ಹುಟ್ಟೂರಾದ ಹೆಬ್ರಿ ತಾಲ್ಲೂಕಿನ ಕೂಡ್ಲುವಿನಲ್ಲಿ ಬುಧವಾರ ನೆರವೇರಿತು. ಕೂ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಪ್ರವಾಸ-ಪಾರ್ಟಿಗಳು ಮತ್ತು ಆನಂದ ವಿಹಾರಗಳು ಇಂದು ನಿಮ್ಮನ್ನು ಉತ್ತಮ ಮೂಡ್‌ನಲ್ಲಿಡುತ್ತವೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ.

ವೃಷಭ ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು. ಇದು ನೀವು ಈ ಪ್ರಪಂಚದ ಎಲ್ಲಾ ಹಾಡುಗಳನ್ನು ಮರೆಯುವಂತೆ ಮಾಡುತ್ತದೆ.

ಮಿಥುನ ನಿಮ್ಮ ಹೆತ್ತವರ ಆರೋಗ್ಯದ ಬಗೆಗೆ ಹೆಚ್ಚುವರಿ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ. ಪ್ರೀತಿಯ ಜೀವನ ಇಂದು ನಿಜವಾಗಿಯೂ ಸುಂದರವಾಗಿ ಅರಳುತ್ತದೆ. ನಿಮ್ಮ ವಿಶ್ವಾಸ ಬೆಳೆಯುತ್ತಿದೆ.

ಕರ್ಕಾಟಕ ಧ್ಯಾನ ಪರಿಹಾರ ತರುತ್ತದೆ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.

ಸಿಂಹ ಉತ್ತಮ ಜೀವನಕ್ಕಾಗಿ ನಿಮ್ಮ ಆರೋಗ್ಯ ಮತ್ತು ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

ಕನ್ಯಾ ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಇತರರ ವ್ಯವಹಾರಗಳಲ್ಲಿ ನಿಮ್ಮ ಮೂಗುತೂರಿಸುವಿಕೆಯನ್ನು ಇಂದು ತಡೆಯಬೇಕು.

ತುಲಾ ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು.

ವೃಶ್ಚಿಕ ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ.

ಧನಸ್ಸು ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ.

ಮಕರ ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು.

ಕುಂಭ ಕುಟುಂಬದ ಸದಸ್ಯರೊಂದಿಗೆ ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು. ಪ್ರಮುಖ ವ್ಯಾಪಾರ ಸಮಾಲೋಚನೆಯ ಬಗ್ಗೆ ಮಾತನಾಡುವಾಗ ನಿಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿಡಿ.

ಮೀನ ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ. ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ. ಪ್ರೀತಿಪಾತ್ರರು ನಿಮ್ಮನ್ನು ಸಂತೋಷವಾಗಿರಿಸಲು ಕೆಲಸಗಳನ್ನು ಮಾಡುತ್ತಾರೆ.

ಆಸ್ಪತ್ರೆ, ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಸುಸ್ಥಿತಿಯಲ್ಲಿರಲಿ

ಸಣ್ಣಪುಟ್ಟ ದುರಸ್ಥಿಗಳಿದ್ದರೆ ಲಭ್ಯವಿರುವ ಅನುದಾನ ಬಳಸಿಕೊಂಡು ಅವುಗಳನ್ನು ಬಳಕೆಗೆ ಯೋಗ್ಯ ರೀತಿಯಲ್ಲಿ ಪರಿವರ್ತಿಸಬೇಕು

• ಉದಯವಾಹಿನಿ, ಚಿತ್ರದುರ್ಗ

ಜಿಲ್ಲೆಯಲ್ಲಿನ ವಸತಿನಿಲಯಗಳು, ಆಸ್ಪತ್ರೆ, ಶಾಲೆ, ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯಗಳು ಸುಸ್ಥಿತಿಯಲ್ಲಿರುವಂತೆ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಜೆ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ವಿಶ್ವ ಶೌಚಾಲಯ ದಿನಾಚರಣೆ ಪ್ರಯುಕ್ತ ಶೌಚಾಲಯ ಮತ್ತು ನೀರು ನಿರ್ವಹಣೆ ಕುರಿತು ಚರ್ಚಿಸಲು ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಆಸ್ಪತ್ರೆ, ಶಾಲೆ, ಅಂಗ ನವಾಡಿ ಕೇಂದ್ರಗಳಲ್ಲಿರುವ ಶೌಚಾಲಯಗಳು ಸಣ್ಣಪುಟ್ಟ ದುರಸ್ಥಿಗಳಿದ್ದರೆ ಲಭ್ಯವಿರುವ ಅನುದಾನ ಬಳಸಿಕೊಂಡು ಅವುಗಳನ್ನು ಬಳಕೆಗೆ ಯೋಗ್ಯ ರೀತಿಯಲ್ಲಿ ಪರಿವರ್ತಿಸಬೇಕು ಎಂದು ಸೂಚಿಸಿದರು. ಗ್ರಾಮೀಣ ಸಮುದಾಯದಲ್ಲಿ ಸುರಕ್ಷಿತ ನೈರ್ಮಲ್ಯ, ಶುಚಿತ್ವ ಕುರಿತು ಜಾಗೃತಿ ಮೂಡಿಸಿ ಶೌಚಾಲಯಗಳನ್ನು ನಿರಂತರವಾಗಿ ಬಳಸುವಂತೆ ಪ್ರೇರೇಪಿಸುವ ಉದ್ದೇಶದೊಂದಿಗೆ ವಿಶ್ವ ಶೌಚಾಲಯ ದಿನ ಆಚರಿಸಲಾಗುತ್ತಿದೆ.

ನ.19 ರಿಂದ ಡಿ.20ರವರೆಗೆ ಜಿಲ್ಲೆಯಾದ್ಯಂತ ನಮ್ಮ ಶೌಚಾಲಯ ನಮ್ಮ ಗೌರವ ಆಂದೋಲನ ಹಮ್ಮಿಕೊಳ್ಳಲಾಗಿದೆ.

ನಮ್ಮ ಶೌಚಾಲಯ ನಮ್ಮ ಗೌರವ ಆಂದೋಲನ

ಅಂದದ ಶೌಚಾಲಯ-ಆನಂದದ ಜೀವನ ಎಂಬ ಘೋಷ ವಾಕ್ಯದೊಂದಿಗೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ವಿಶೇಷ ಆಂದೋಲನ ನಡೆಸಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುವುದು.

ಈ ದಿನಾಚರಣೆಯು ಬಹಿರ್ದೆಸೆ ಮುಕ್ತ ಸ್ಥಿತಿಯ ಸ್ಥಾನಮಾನವನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ತಿಳಿಸಿದ ಅವರು, ಗ್ರಾಮ ಪಂಚಾಯಿತಿ ಹಂತದಲ್ಲಿ ಸ್ವಚ್ಛ, ಸುಂದರ ವೈಯಕ್ತಿಕ ಗೃಹ ಶೌಚಾಲಯ (ಉತ್ತಮ ಶೌಚಾಲಯ) ಸ್ಪರ್ಧೆಯನ್ನು ಆಯೋಜಿಸಬೇಕು.

ಅದೇ ರೀತಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಸಮುದಾಯ ಶೌಚಾಲಯ ಸ್ಪರ್ಧೆಗಳನ್ನು ಆಯೋಜಿಸಬೇಕು. ತದನಂತರ ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ವಿಜೇರಿಗೆ ಪುರಸ್ಕಾರಗಳನ್ನು ನೀಡಿ ಗೌರವಿಸುವಂತೆ ತಿಳಿಸಿದರು. ಸ್ಥಳೀಯ ಪ್ರಭಾವಿಗಳು, ಸ್ವಚ್ಛತಾ ರಾಯಬಾರಿಗಳನ್ನು ಗುರುತಿಸಿ, ಅವರುಗಳನ್ನು ಈ ನಮ್ಮ ಶೌಚಾಲಯ-ನಮ್ಮ ಗೌರವ ವಿಶೇಷ ಆಂದೋಲನದಲ್ಲಿ ತೊಡಗಿಸಿಕೊಳ್ಳುವಂತೆ ಕ್ರಮವಹಿಸಬೇಕು. ಜಿಲ್ಲೆಯಲ್ಲಿರುವ ಕೈಗಾರಿಕೆಗಳು, ಸ್ವಯಂ ಸೇವಾ ಸಂಘಗಳು, ಸರ್ಕಾರೇತರ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಇತರೆ ಸಾಂಸ್ಥಿಕ ಸಂಸ್ಥೆಗಳನ್ನು ಗುರುತಿಸಿ, ಈ ಆಂದೋಲನದ ಭಾಗವಾಗಿರುವ ಫಲಾನುಭವಿಗಳಿಗೆ ಪುರಸ್ಕಾರ ವಿತರಣೆ, ಶೌಚಾಲಯಗಳ ಸೌಂದರ್ಯೀಕರಣ ಪುರಸ್ಕಾರ ನೀಡುವ ಕಾರ್ಯದಲ್ಲಿ ತೊಡಗಿಕೊಳ್ಳುವುದು. ಉತ್ತಮ ಯಶೋಗಾಥೆ ಮತ್ತು ಉತ್ತಮ ಅಭ್ಯಾಸಗಳ ಕುರಿತು ವರದಿಗಳನ್ನು ಸಿದ್ದಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಉದಯವಾಹಿನಿ ಚಿತ್ರ

ವಿಶೇಷ ಆಂದೋಲನಗಳಿಗೆ ಚಾಲನೆ ನೀಡುವಂತೆ ಸಲಹೆ

ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಗಣನೀಯ ಕೊಡುಗೆ ನೀಡಿದವರನ್ನು ಗುರುತಿಸಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತದಲ್ಲಿ ಗೌರವಿಸಬೇಕು ಎಂದು ತಿಳಿಸಿದ ಅವರು, ಜಿಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿ ಮತ್ತು ಗ್ರಾಮಗಳ ಮಟ್ಟದಲ್ಲಿ ಶೌಚಾಲಯ ಬಳಕೆ ಮತ್ತು ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸುವ ನಿಟ್ಟಿನಲ್ಲಿ ಜನರ ನಡವಳಿಕೆ ಬದಲಾವಣೆ ಮಾಡಲು ವಿಶೇಷ ಆಂದೋಲನಗಳಿಗೆ ಚಾಲನೆ ನೀಡುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಗಾಯತ್ರಿ, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಬಸನಗೌಡ ಪಾಟೀಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ.ಪಿ. ರೇಣುಪ್ರಸಾದ್ ಇಲಾಖೆ ಅಧಿಕಾರಿಗಳು ಇದ್ದರು.

ನಿರುಪಯುಕ್ತ ಸಮುದಾಯ ಶೌಚಾಲಯಗಳನ್ನು ಗುರುತಿಸುವುದು

ನಿರುಪಯುಕ್ತ ಸಮುದಾಯ ಶೌಚಾಲಯಗಳನ್ನು ಗುರುತಿಸುವುದು ಮತ್ತು ಅವುಗಳನ್ನು ಬಳಕೆಗೆ ಯೋಗ್ಯ ರೀತಿಯಲ್ಲಿ ಪರಿವರ್ತಿಸಬೇಕು. ನೈರ್ಮಲ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸ್ವಚ್ಛತಾ ಕಾರ್ಮಿಕರು, ಸ್ವಚ್ಛತಾಗಾರರನ್ನು ಗುರುತಿಸಿ, ತಾಲ್ಲೂಕುವಾರು ಗ್ರಾಮ ಪಂಚಾಯಿತಿ ಸ್ವಚ್ಛತಾಗಾರರಿಗೆ ಆರೋಗ್ಯ ಶಿಬಿರ ಹಾಗೂ ಸುರಕ್ಷಾ ಕವಚಗಳನ್ನು ನೀಡಬೇಕ ಹಾಗೂ ವಿವಿಧ ಯೋಜನೆಗಳಡಿ ದೊರೆಯುವ ಸೌಲಭ್ಯಗಳನ್ನು ಒದಗಿಸಲು ನೋಂದಾಯಿಸುವುದು ಮತ್ತು ಮಂಜೂರಾತಿ ಆದೇಶಗಳನ್ನು ನೀಡಲು ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಾಂತಿ ಭೇದಿ ಪ್ರಕರಣಗಳ ಸಮರ್ಥ ನಿರ್ವಹಣೆ: ಸಿರಿಗೆರೆಯ 64 ವಿದ್ಯಾರ್ಥಿಗಳ ಆರೋಗ್ಯ ಚೇತರಿಕೆ

• ಉದಯವಾಹಿನಿ, ಚಿತ್ರದುರ್ಗ

ಸಿರಿಗೆರೆ ಅಕ್ಕಮಹಾದೇವಿ ವಸತಿ ನಿಲಯದಲ್ಲಿ ಸಿರಿಗೆರೆಯ ವಿವಿಧ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ನೀಲಾಂಬಿಕ ಪ್ರೌಢಶಾಲೆ ಮತ್ತು ಬಿ ಎಲ್ ಆರ್ ಕಾಲೇಜಿನ ಒಟ್ಟು 64 ವಿದ್ಯಾರ್ಥಿಗಳು ಇದ್ದಕ್ಕಿದ್ದಂತೆ ವಾಂತಿ ಭೇದಿಯಿಂದ ಸಮುದಾಯ ಆರೋಗ್ಯ ಕೇಂದ್ರ ಸಿರಿಗೆರೆಯಲ್ಲಿ ಚಿಕಿತ್ಸೆಗೆ ದಾಖಲಾದರು ವಿಷಯ ತಿಳಿದ ಜಿಲ್ಲಾ ಕಣ್ಗಾವಲು ಘಟಕ ಕ್ಷಿಪ್ರ ನಿಗಾವಣ ತಂಡ ಮತ್ತು ತಾಲೂಕಾ ಆರೋಗ್ಯ ಅಧಿಕಾರಿಗಳವರ ನಿಗಾವಣ ತಂಡ ಸ್ಥಳಕ್ಕೆ ಭೇಟಿ ನೀಡಿ ದಾಖಲಾದ ಮಕ್ಕಳ ಯೋಗ ಕ್ಷೇಮ ವಿಚಾರಣೆ ನಡೆಸಿದರು.

ಜಿಲ್ಲಾ ಸರ್ವೇಕ್ಷಣಾ ಧಿಕಾರಿ ಡಾಕ್ಟರ್ ಚಂದ್ರಶೇಖರ್ ಕಾಂಬ್ಳಿಮಟ್ ತುರ್ತು ಚಿಕಿತ್ಸೆಯ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು ನಂತರ ತಾಲೂಕ್ ಆರೋಗ್ಯ ಅಧಿಕಾರಿ ಡಾಕ್ಟರ್ ಬಿ ವಿ ಗಿರೀಶ್ ರವರ ತಂಡ , ಮುಂಜಾಗ್ರತಾ ಕ್ರಮ ನಿರ್ವಹಣೆಗಾಗಿ ಅಕ್ಕಮಹಾದೇವಿ ವಿದ್ಯಾರ್ಥಿ ನಿಲಯಕ್ಕೆ ಭೇಟಿ ನೀಡಿದರು. ಶೌಚಾಲಯ ಅಡುಗೆ ಕೋಣೆ ತರಕಾರಿ ಸಂಗ್ರಹನಾಲಯ ದಿನಸಿ ಸಂಗ್ರಹ ಕೊಠಡಿ ಕುಡಿಯುವ ನೀರಿನ ವ್ಯವಸ್ಥೆ ಪರಿಸರ ಮಾಲಿನ್ಯದ ವ್ಯವಸ್ಥೆಗಳನ್ನ ಭೋಜನಾಲಯದ ವ್ಯವಸ್ಥೆಯನ್ನು ಸಮರ್ಪಕವಾಗಿ ತಪಾಸಣೆ ನಡೆಸಿ ಕುಡಿಯುವ ನೀರಿನ ನಾಲ್ಕು ಮಾದರಿಗಳನ್ನು ಆಹಾರದ ಮಾದರಿಗಳನ್ನ ಸಂಗ್ರಹಿಸಿ ಮುಂದಿನ ಪರಿಶೀಲನೆಗಾಗಿ ಜಿಲ್ಲಾ ಸರ್ವೇಕ್ಷಣ ಘಟಕಕ್ಕೆ ಕಳುಹಿಸಿಕೊಡಲಾಯಿತು. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವಾರ್ಡನ್‌ಗಳಿಗೆ ಮತ್ತು ಆಹಾರ ತಯಾರಿಸುವವರಿಗೆ ವಿದ್ಯಾರ್ಥಿಗಳನ್ನು ಸೇರಿಸಿ ಗುಂಪು ಸಭೆ ನಡೆಸಿ ಆಹಾರ ಸೇವನೆಯ ಕ್ರಮ ವೈಯಕ್ತಿಕ ಸ್ವಚ್ಛತೆ ಶೌಚಾಲಯಗಳ ಸ್ವಚ್ಛತೆ ಅಡುಗೆ ಮನೆಯ ಸ್ವಚ್ಛತೆ ಕೈ ತೊಳೆಯುವ ವಿಧಾನ ಸಾಬೂನಿನ ಬಳಕೆ ಬಯಲು ಮಲವಿಸರ್ಜನೆಯ ದುಷ್ಪರಿಣಾಮ ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿ ಶಿಕ್ಷಣ ಸಾಮಾಜಿಕ ಅರಿವು ಮೂಡಿಸಲಾಯಿತು.

ಉದಯವಾಹಿನಿ ಚಿತ್ರ

ದುಷ್ಪರಿಣಾಮ ವಿಷಯಗಳ ಬಗ್ಗೆ ಮಾಹಿತಿ

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಲಮ್ಮ ಗ್ರಾಮ ಪಂಚಾಯಿತಿ ಸದಸ್ಯರಾದ ಮೋಹನ್ ದೇವರಾಜ್ ಬಸವರಾಜ್ ಪಂಚಾಕ್ಷರಯ್ಯ ಪ್ರದೀಪ್, ಡಾಕ್ಟರ್ ಜಯಶ್ರೀ ಡಾಕ್ಟರ್ ಪವಿತ್ರ ಡಾಕ್ಟರ್ ತಿಮ್ಮೇಗೌಡ ಡಾಕ್ಟರ್ ರುದ್ರೇಶ್ ತಾಲೂಕ್ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಎನ್.ಎಸ್ ಮಂಜುನಾಥ್ ಬಿ ಮೂಗಪ್ಪ ಆರೋಗ್ಯ ನಿರೀಕ್ಷಣಾಧಿಕಾರಿ ಗಳಾದ ಸುನಿಲ್ ಪ್ರವೀಣ್ ಕುಮಾರ್ ಎಮ್ ಎಚ್ ಮಂಜುನಾಥ್, ವಿಶ್ವನಾಥ್ ಫಾರ್ಮಸಿ ಅಧಿಕಾರಿ ಮೋಹನ್ ಸಮುದಾಯ ಆರೋಗ್ಯ ಅಧಿಕಾರಿ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿ. ಹಾಸ್ಟಲ್ ವಾರ್ಡನ್

ಅಧ್ಯಕ್ಷರಾಗಿ ರತ್ನಪ್ಪಾ ಉಪಾಧ್ಯಕ್ಷ ಜಯಶೀಲಾ ಆಯ್ಕೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕನಕಪುರ ಗ್ರಾಮ ಪಂಚಾಯತಗೆ ಅಧ್ಯಕ್ಷ ಉಪಾಧ್ಯಕ್ಷರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರತ್ನಪ್ಪಾ ಕನಕಪುರ ಹಾಗೂ ಗೌತಮ್ ದೋಟಿಕೋಳ ಎರಡು ನಾಮಪತ್ರ ಸಲ್ಲಿಕೆಯಾದರೆ ಉಪಾಧ್ಯಕ್ಷ ಸ್ಥಾನಕ್ಕೆ ಜಯಶೀಲಾ ಘಾಳಪ್ಪಾ ಒಂದೇ ನಾಮಪತ್ರ ಸಲ್ಲಿಕೆಯಾಗಿದೆ.

ಕನಕಪುರ ಗ್ರಾಮ ಪಂಚಾಯತ್ ಒಟ್ಟು 23ಸದಸ್ಯರಿದ್ದು 21ಸದಸ್ಯರು ಹಾಜರಿದ್ದು ಇಬ್ಬರು ಗೈರುಹಾಜರಿದ್ದರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಗೌತಮ್ ದೋಟಿಕೋಳ ಕೇವಲ 06ಮತಗಳು ಪಡೆದರೆ ರತ್ನಪ್ಪಾ ಕನಕಪುರ ಒಟ್ಟು 15ಮತಗಳು ಪಡೆದು ಗೆಲುವು ಸಾಧಿಸಿದ್ದಾರೆ, ಉಪಾಧ್ಯಕ್ಷ ಸ್ಥಾನಕ್ಕೆ ಜಯಶೀಲಾ ಘಾಳಪ್ಪಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ತಿಳಿಸಿದ್ದಾರೆ.

ಚುನಾವಣೆ ಪ್ರಕ್ರಿಯೆ ಮುಕ್ತಾಯ ನಂತರ ಪ್ರಮುಖ ಮುಖಂಡರು, ಬೆಂಬಲಿಗರು ಜಯ ಘೋಷಗಳು ಕೂಗಿ ಶಾಲು ಹೂಮಾಲೆ ಹಾಕಿ ಸಿಹಿ ತಿನ್ನಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಉದಯವಾಹಿನಿ ಚಿತ್ರ

ಪಿಡಿಓ ಪವನಕುಮಾರ ಮೇತ್ರಿ, ಲಕ್ಷ್ಮಣ ಆವುಂಟಿ, ಲೋಕೇಶರಡ್ಡಿ, ಶರಣು ಪೂಜಾರಿ, ನರಸಮ್ಮಾ ಲಕ್ಷ್ಮಣ ಆವುಂಟಿ, ನಾಗರಡ್ಡಿ ದೇಸಾಯಿ, ಸುನೀಲ ಮೇತ್ರಿ, ಸಂಗಮೇಶ, ರೇಣುಕಾ ನಾಗರಾಜ, ದೀಕ್ಷಾ ಬಸವರಾಜ, ಸಂಗೀತಾ ಶಾಮರಾವ, ಪ್ರೇಮಲಾ, ಹಣಮಂತರಾವ, ಸವಿತಾ ಹಣಮಂತ ಆವುಂಟಿ, ಜಗದೇವಿ ರಾಮಣ್ಣ, ಸಿದ್ದಮ್ಮ ಮಲ್ಲಪ್ಪಾ, ಸುಧಾ ಸಂಗಮ್ಮ, ಬಸವರಾಜ ನಂದಾ, ಜಗನ್ನಾಥ ಇಟಗಿ, ಮಲ್ಲಿಕಾರ್ಜುನ ರಾಯಗೊಂಡ, ಸಿದ್ದಪ್ಪ, ವೆಂಕಪ್ಪಾ ಸಾತನೂರ, ಮಲ್ಲಪ್ಪ ತಳವಾರ, ಅಶೋಕ ಕೊದಂಪೂರ, ಗೈಬಣ್ಣ ದಸ್ತಾಪೂರ, ಮಹೇಶ ತಾಜಲಾಪೂರ, ಗೋಪಾಲ ಮೇತ್ರಿ, ರಾಜಕುಮಾರ, ಅನೇಕರಿದ್ದರು.

ಸಿಎ ಸೈಟ್ ನಲ್ಲಿದ್ದ ಶಿವ, ಗಣೇಶ ದೇವಸ್ಥಾನ ತೆರವು

• ಉದಯವಾಹಿನಿ, ರಾಯಚೂರು

ಇಲ್ಲಿನ ನಗರದ ಸಂತೋಷ ನಗರದ ಬಡಾವಣೆಯಲ್ಲಿ ಸಿಎ ಸೈಟ್ ನಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶಿವ ಮತ್ತು ಗಣೇಶ ದೇವಸ್ಥಾನವನ್ನು ಅಧಿಕಾರಿಗಳು ಮಂಗಳವಾರ ರಾತೋರಾತ್ರಿ ಬಿಗಿ ಬಂದೋಬಸ್ತ್ ನಲ್ಲಿ ತೆರವುಗೊಳಿಸಿದ್ದಾರೆ.

ನಗರದ ಸರ್ಕಾರಿ ಪ್ರೌಢಶಾಲೆ ನಿರ್ಮಿಸಲು 2022ರ ಜೂನ್ 1ರಂದು ಪ್ರೌಢಶಾಲೆ ಕಟ್ಟಡಕ್ಕೆ ಮಂಜೂರು ಸಿಎ ಸೈಟ್ ಮಂಜೂರಾಗಿತ್ತು. ಆದರೆ, ಕೆಲವರು ಅಲ್ಲಿ ನಿರ್ಮಿಸಿದ್ದ ಶೆಡ್ ನಲ್ಲಿ ದೇವರನ್ನು ಪ್ರತಿಷ್ಠಾಪಿಸಿ ಸ್ಥಳ ಕಬಳಿಸುವ ಹುನ್ನಾರ ನಡೆಸಿದ್ದರು. ಈ ಸ್ಥಳ ತೆರವುಗೊಳಿಸುವಂತೆ ಸಾಕಷ್ಟು ಬಾರಿ ಸಂಘಟನೆಗಳು, ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದವು. ಆದರೂ ಯಾರು ಕ್ರಮ ಕೈಗೊಂಡಿರಲಿಲ್ಲ.

ಮಂಗಳವಾರ ರಾತ್ರಿ ಸಹಾಯಕ ಆಯುಕ್ತ ಗಜಾನನ ಬಾಲೆ ನೇತೃತ್ವದಲ್ಲಿ ನೂರಾರು ಪೊಲೀಸರು ಕಾರ್ಯಾಚ

ಡಬ್ಲ್ಯೂಡಬ್ಲ್ಯೂಇ ಮಾಜಿ ಸಿಇಒಗೆ ಶಿಕ್ಷಣ ಕಾರ್ಯದರ್ಶಿ ಹುದ್ದೆ ನೀಡಿದ ಟ್ರಂಪ್

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ತರುವ ಜವಾಬ್ದಾರಿಯನ್ನು ಲಿಂಡಾ ಅವರಿಗೆ ವಹಿಸಿರುವುದಾಗಿ ಟ್ರಂಪ್ ತಿಳಿಸಿದ್ದಾರೆ

ವಾಷಿಂಗ್ಟನ್: ಚವರ್ಲ್ಡ್ ರೆಸ್ಲಿಂಗ್ ಎಂಟರ್‌ಟೈನ್‌ಮೆಂಟ್ (ಡಬ್ಲ್ಯೂಡಬ್ಲ್ಯೂಇ) ಕ್ರೀಡೆಯ ಮಾಜಿ ಸಿಇಒ ಲಿಂಡಾ ಮೆಕ್‌ಮಹೋನ್ ಅವರನ್ನು ಶಿಕ್ಷಣ ಇಲಾಖೆ ಕಾರ್ಯದರ್ಶಿಯನ್ನಾಗಿ ಅಮೆರಿಕದ ಮುಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇಮಿಸಿದ್ದಾರೆ. ಲಿಂಡಾ ಅವರನ್ನು ಪೋಷಕರ ಹಕ್ಕುಗಳ ದಿಟ್ಟ ಪ್ರತಿಪಾದಕಿ' ಎಂದು ಬಣ್ಣಿಸಿರುವ ಟ್ರಂಪ್, ನಾವು ಶಿಕ್ಷಣದ ಹೊಣೆಗಾರಿಕೆಗಳನ್ನು ರಾಜ್ಯಗಳ ಸುಪರ್ದಿಗೆ ಮರಳಿ ನೀಡುತ್ತಿದ್ದೇವೆ. ಈ ಪ್ರಯತ್ನದ ನೇತೃತ್ವವನ್ನು ಲಿಂಡಾ ನಿಭಾಯಿಸಲಿದ್ದಾರೆ ಎಂದು ಹೇಳಿದ್ದಾರೆ.

ಶಿಕ್ಷಣ ಇಲಾಖೆಯನ್ನು ರದ್ದುಗೊಳಿಸುವುದಾಗಿ ಡೊನಾಲ್ಡ್ ಟ್ರಂಪ್ ಅವರು ಚುನಾವಣಾ ಪ್ರಚಾರದಲ್ಲಿ ಘೋಷಿಸಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ತರುವ ಜವಾಬ್ದಾರಿಯನ್ನು ಲಿಂಡಾ ಅವರಿಗೆ ವಹಿಸಿರುವುದಾಗಿ ಟ್ರಂಪ್ ತಿಳಿಸಿದ್ದಾರೆ.

ಜಿಪ್ ಕೋಡ್ (ಮಕ್ಕಳ ಊರು) ಅಥವಾ ಆದಾಯ ಏನೇ ಇದ್ದರೂ ಅದ್ಭುತ ಶಿಕ್ಷಣ ಪಡೆಯಲು ಮಕ್ಕಳಿಗೆ ಸದವಕಾಶ ಒದಗಿಸುವುದಕ್ಕಾಗಿ ಲಿಂಡಾ ಕಠಿಣ ಶ್ರಮ ವಹಿಸುತ್ತಿದ್ದಾರೆ. ಅಮೆರಿಕದ ಪ್ರತಿ ರಾಜ್ಯದಲ್ಲಿಯೂ 'ಆಯ್ಕೆ'ಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಅವರು ನಿರಂತರ ಹೋರಾಡಲಿದ್ದಾರೆ ಎಂದಿದ್ದಾರೆ.

ಕನೆಕ್ಟಿಕಟ್ ಶಿಕ್ಷಣ ಮಂಡಳಿಯಲ್ಲಿ 2 ವರ್ಷ ಮತ್ತು ಖಾಸಗಿ ಕ್ಯಾಥೋಲಿಕ್ ಶಾಲೆ ಸೇಕ್ರೆಡ್ ಹಾರ್ಟ್ ವಿಶ್ವವಿದ್ಯಾಲಯದ ಟ್ರಸ್ಟಿಯಾಗಿ 16 ವರ್ಷಗಳ ಅವರ

- **ವರ್ಲ್ಡ್ ರೆಸ್ಲಿಂಗ್ ಎಂಟರ್‌ಟೈನ್‌ಮೆಂಟ್ ಸಹ ಸಂಸ್ಥಾಪಕಿ ಲಿಂಡಾ ಮೆಕ್‌ಮಹೋನ್**
- **ರದ್ದುಗೊಳಿಸುವುದಾಗಿ ಘೋಷಿಸಿರುವ ಶಿಕ್ಷಣ ಇಲಾಖೆಗೆ ಕಾರ್ಯದರ್ಶಿಯನ್ನಾಗಿ ನೇಮಕ**
- **2009ರಲ್ಲಿ ಡಬ್ಲ್ಯೂಡಬ್ಲ್ಯೂಇ ತೊರೆದು ರಾಜಕೀಯ ಪ್ರವೇಶಿಸಿದ್ದ ಟ್ರಂಪ್ ಬೆಂಬಲಿಗ ಲಿಂಡಾ**

ಅನುಭವವನ್ನು ಟ್ರಂಪ್ ಪರಿಗಣಿಸಿದ್ದಾರೆ.

ಸಣ್ಣ ಕುಸ್ತಿ ಮನರಂಜನಾ ಸಂಸ್ಥೆಯಿಂದ ಅದನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಪಟ್ಟಿಯಾಗುವಂತಹ ಮಾಧ್ಯಮ ಸಾಮ್ರಾಜ್ಯವನ್ನಾಗಿ ಬೆಳೆಸಿದ್ದು ಸಣ್ಣ ಮಾತಲ್ಲ. ಅಮೆರಿಕದ ಪ್ರಮುಖ ಕ್ರೀಡಾ ಫ್ರಾಂಚೈಸಿಗಳಲ್ಲಿ ಒಂದಾಗಿ ಇದು ಕೋಟ್ಯಂತರ ಡಾಲರ್ ವಹಿವಾಟು ನಡೆಸುತ್ತಿದೆ. 'ದಿ ಅಪ್ರೈಂಟಿಸ್' ಎಂಬ ರಿಯಾಲಿಟಿ ಶೋ ನಡೆಸಿಕೊಡುತ್ತಿದ್ದ ಡೊನಾಲ್ಡ್ ಟ್ರಂಪ್, 2007ರಲ್ಲಿ ರೆಸಲ್‌ಮೇನಿಯಾದಲ್ಲಿ ಕಾಣಿಸಿಕೊಂಡಿದ್ದರು. ಇದರಲ್ಲಿ ಕುಸ್ತಿ ಅಖಾಡದ ಒಳಗೆ ವಿನ್ಸ್ ಮೆಕ್‌ಮಹೋನ್ ಅವರ ಕೂದಲನ್ನು ಟ್ರಂಪ್ ಶೇವ್ ಮಾಡಿದ್ದರು. ಸತತ ಎರಡು ಬಾರಿ ಕಹಿ ಉಂಡ ಬಳಿಕ ಅವರು ಚುನಾವಣಾ ಅಖಾಡಕ್ಕೆ ಇಳಿಯುವ ಬದಲು ಅಭ್ಯರ್ಥಿಗಳಿಗೆ ಆರ್ಥಿಕ ನೆರವು ಒದಗಿಸುವುದರ ಕಡೆಗೆ ಗಮನ ಹರಿಸಿದರು.



2016ರಲ್ಲಿ ಟ್ರಂಪ್ ಅವರು ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಆಯ್ಕೆಯಾಗಲು 6 ಮಿಲಿಯನ್ ಡಾಲರ್ ಆರ್ಥಿಕ ನೆರವು ಒದಗಿಸಿದ್ದರು.

ಆ ಚುನಾವಣೆಯಲ್ಲಿ ಗೆದ್ದು ಶ್ವೇತ ಭವನ ಪ್ರವೇಶಿಸಿದ ಒಂದು ತಿಂಗಳಲ್ಲಿ ಲಿಂಡಾ ಅವರನ್ನು ಸ್ಮಾಲ್ ಬಿಜಿನೆಸ್ ಅಡ್ಮಿನಿಸ್ಟ್ರೇಷನ್‌ಗೆ ಮುಖ್ಯಸ್ಥೆಯನ್ನಾಗಿ ಟ್ರಂಪ್ ನೇಮಿಸಿದ್ದರು. ಇದು ಕಂಪೆನಿಗಳು ಹಾಗೂ ಉದ್ಯಮಗಳಿಗೆ ಸಾಲ ಮತ್ತು ವಿಪತ್ತು ಪರಿಹಾರಗಳನ್ನು ಒದಗಿಸುವ, ಗುತ್ತಿಗೆ ಕಾನೂನುಗಳನ್ನು ಸರಕಾರಿ ಅಧಿಕಾರಿಗಳು ಪಾಲಿಸುತ್ತಿರುವುದರ ಮೇಲೆ ನಿಗಾ ವಹಿಸುವ ಸಂಸ್ಥೆಯಾಗಿದೆ.

2019ರಲ್ಲಿ ಅದಕ್ಕೆ ರಾಜೀನಾಮೆ ನೀಡಿದ ಲಿಂಡಾ, ಟ್ರಂಪ್ ಪರವಾದ ರಾಜಕೀಯ ಕ್ರಿಯಾ ಸಮಿತಿ 'ಅಮೆರಿಕ ಫಸ್ಟ್ ಆಕ್ಷನ್' ಅಧ್ಯಕ್ಷೆಯಾಗಿ ನೇಮಕಗೊಂಡರು. 2021ರಲ್ಲಿ ಟ್ರಂಪ್ ಅವರ ಮೊದಲ ಅವಧಿಯ ಸಲಹೆಗಾರರು ಹಾಗೂ ಲ್ಯಾರಿ ಕುಡ್ಲೊವ್ ಜತೆಗೂಡಿ ಟ್ರಂಪ್ ಪರವಾದ ಚಿಂತಕರ ಚಾವಡಿ 'ಅಮೆರಿಕ ಫಸ್ಟ್ ಪಾಲಿಸಿ ಇನ್‌ಸ್ಟಿಟ್ಯೂಟ್' ಅನ್ನು ರಚಿಸಿದ ಲಿಂಡಾ, ಅದರ ಮಂಡಳಿ ಅಧ್ಯಕ್ಷೆಯೂ ಆಗಿದ್ದಾರೆ. 2020ರ ಚುನಾವಣೆಯಲ್ಲಿ ಜೋ ಬೈಡನ್ ಎದುರು ಟ್ರಂಪ್ ಸೋತರೂ, ಲಿಂಡಾ ಅವರು ಅಮೆರಿಕ ಫಸ್ಟ್ ಕ್ರಿಯಾ ಸಮಿತಿಯ ಮೂಲಕ ಟ್ರಂಪ್ ಅವರನ್ನು ಬೆಂಬಲಿಸುವ ಕಾರ್ಯವನ್ನು ಮುಂದುವರಿಸಿದ್ದರು. 2024ರ ಚುನಾವಣೆಯಲ್ಲಿ ಕೂಡ ಈ ಸಮಿತಿ ಸಕ್ರಿಯವಾಗಿ ಕೆಲಸ ಮಾಡಿದೆ. ಟ್ರಂಪ್ ಅವರು ಉಮೇದುವಾರಿಕೆ ಸಲ್ಲಿಸಿದಾಗ, ಹಣಕಾಸು ಸೇವಾ ಕಂಪೆನಿ ಕ್ಯಾಂಟರ್ ಫಿಟ್ಜ್‌ಗೆರಾಲ್ಡ್ ಮುಖ್ಯ ಕಾರ್ಯನಿರ್ವಾಹಕ ಹೋವಾರ್ಡ್ ಲುಟ್ನಿಕ್ ಜತೆಗೆ ರಿಪಬ್ಲಿಕ್ ಪರಿವರ್ತನಾ ತಂಡದಲ್ಲಿ ಸಹ ಅಧ್ಯಕ್ಷೆಯಾಗಿ ಲಿಂಡಾ ಕಾರ್ಯನಿರ್ವಹಿಸಿದ್ದರು.

ಯಾರಿದು ಲಿಂಡಾ ಮೆಕ್‌ಮಹೋನ್?

ಡಬ್ಲ್ಯೂಡಬ್ಲ್ಯೂಇ ಪಂದ್ಯಗಳನ್ನು ನೋಡುತ್ತಿದ್ದವರಿಗೆ ಲಿಂಡಾ ಹೆಸರು ಪರಿಚಿತವಾಗಿರುತ್ತದೆ. ಪತಿ ವಿನ್ಸ್ ಮೆಕ್‌ಮಹೋನ್ ಅವರ ಜತೆಗೂಡಿ ಡಬ್ಲ್ಯೂಡಬ್ಲ್ಯೂಇ ಅನ್ನು ಸ್ಥಾಪಿಸಿದವರು ಲಿಂಡಾ. ವೃತ್ತಿಪರ ಕುಸ್ತಿ ಪ್ರವರ್ತಕ ವಿನ್ಸೆಂಟ್ ಮೆಕ್‌ಮಹೋನ್ ಅವರ ಮಗ ವಿನ್ಸ್ ಜತೆ 1966ರಲ್ಲಿ ಲಿಂಡಾ ಮದುವೆ ನಡೆದಿತ್ತು. 15 ವರ್ಷಗಳ ಬಳಿಕ, 1980ರಲ್ಲಿ ಈ ದಂಪತಿ ಟೈಟಾನ್ ಸ್ಪೋರ್ಟ್ಸ್ ಎಂಬ ಕ್ರೀಡಾ ಮನರಂಜನಾ ಕಂಪೆನಿಯನ್ನು ಹುಟ್ಟುಹಾಕಿದರು. ಇದಕ್ಕೆ ನಂತರ ವರ್ಲ್ಡ್ ರೆಸ್ಲಿಂಗ್ ಎಂಟರ್‌ಟೈನ್‌ಮೆಂಟ್ ಎಂಬ ಹೆಸರು ಬಂದಿತು. ಅಲ್ಲಿ ಲಿಂಡಾ ಅವರು ಅಧ್ಯಕ್ಷೆಯಾಗಿ ಹಾಗೂ ಸಿಇಒ ಆಗಿ 2009ರವರೆಗೂ ಕಾರ್ಯ ನಿರ್ವಹಿಸಿದ್ದರು.

ಲಿಂಡಾ ರಾಜಕೀಯ ಪ್ರವೇಶ

2009ರಲ್ಲಿ ಡಬ್ಲ್ಯೂಡಬ್ಲ್ಯೂಇ ಹುದ್ದೆಯಿಂದ ನಿರ್ಗಮಿಸಿದ ಲಿಂಡಾ, ಕನೆಕ್ಟಿಕಟ್‌ನಿಂದ ಅಮೆರಿಕ ಸೆನೆಟ್ ಪ್ರವೇಶಿಸಲು ಎರಡು ಬಾರಿ ಪ್ರಯತ್ನಿಸಿದ್ದರು. ಆದರೆ ಎರಡರಲ್ಲಿಯೂ ಸೋಲು ಅನುಭವಿಸಿದ್ದರು. 2010ರಲ್ಲಿ 50.1 ಮಿಲಿಯನ್ ಡಾಲರ್ ಮತ್ತು 2012ರ ಚುನಾವಣೆಯಲ್ಲಿ 48.7 ಮಿಲಿಯನ್ ಡಾಲರ್ ತಮ್ಮ ಸ್ವಂತದ ಹಣವನ್ನು ಚುನಾವಣಾ ಪ್ರಚಾರಕ್ಕೆ ವಿನಿಯೋಗಿಸಿದ್ದರು. 2012ರ ಪ್ರಚಾರದಲ್ಲಿ ಅವರಿಗೆ ಟ್ರಂಪ್ 5 ಸಾವಿರ ಡಾಲರ್ ದೇಣಿಗೆ ನೀಡಿದ್ದರು.

ಅನ್ ಇಸ್ಲಾಮಿಕ್ ಸಾಹಿತ್ಯಕ್ಕೆ ತಾಲಿಬಾನ್ ಕೊಕ್

ಕಾಬೂಲ್: ಅನ್ ಇಸ್ಲಾಮಿಕ್ ಮತ್ತು ಸರ್ಕಾರಿ ವಿರೋಧಿ ಸಾಹಿತ್ಯವನ್ನು ತೆಗೆದು ಹಾಕುವ ಕಾರ್ಯಕ್ಕೆ ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರ ಮುಂದಾಗಿದೆ.

ಆಮದು ಮಾಡಿದ ಪುಸ್ತಕಗಳನ್ನು ಪರಿಶೀಲಿಸುವುದು, ಗ್ರಂಥಾಲಯಗಳಿಂದ ಪಠ್ಯಗಳನ್ನು ತೆಗೆದುಹಾಕುವುದು ಮತ್ತು ನಿಷೇಧಿತ ಶೀರ್ಷಿಕೆಗಳ ಪಟ್ಟಿಗಳನ್ನು ವಿತರಿಸುವ ಕಾರ್ಯವನ್ನು ಅಲ್ಲಿನ ಅಧಿಕಾರಿಗಳು ಆರಂಭಿಸಿದ್ದಾರೆ.

2021 ರಲ್ಲಿ ತಾಲಿಬಾನ್ ಅಧಿಕಾರಕ್ಕೆ ಬಂದ ನಂತರ ಮತ್ತು ಇಸ್ಲಾಮಿಕ್ ಕಾನೂನು ಅಥವಾ ಷರಿಯಾದ ಅವರ ಕಟ್ಟುನಿಟ್ಟಾದ ವ್ಯಾಖ್ಯಾನವನ್ನು ಜಾರಿಗೊಳಿಸಿದ ಕೂಡಲೇ ಮಾಹಿತಿ ಮತ್ತು ಸಂಸ್ಕೃತಿ ಸಚಿವಾಲಯದ ಅಡಿಯಲ್ಲಿ ಸ್ಥಾಪಿಸಲಾದ ಆಯೋಗವು ಈ ಪ್ರಯತ್ನಗಳನ್ನು ಮುನ್ನಡೆಸುತ್ತದೆ. ಅಕ್ಟೋಬರ್‌ನಲ್ಲಿ, ಸಚಿವಾಲಯವು ಆಯೋಗವು 400 ಪುಸ್ತಕಗಳನ್ನು ಗುರುತಿಸಿದೆ ಎಂದು ಘೋಷಿಸಿತು ಇಸ್ಲಾಮಿಕ್ ಮತ್ತು ಅಫ್ಘಾನ್ ಮೌಲ್ಯಗಳೊಂದಿಗೆ ಸಂಘರ್ಷದಲ್ಲಿದೆ, ಅವುಗಳಲ್ಲಿ ಹೆಚ್ಚಿನವು ಮಾರುಕಟ್ಟೆಗಳಿಂದ ಸಂಗ್ರಹಿಸಲಾ

ಗಿದೆ. ವಶಪಡಿಸಿಕೊಂಡ ಪುಸ್ತಕಗಳ ಬದಲಿಗೆ ಕುರಾನ್ ಮತ್ತು ಇತರ ಇಸ್ಲಾಮಿಕ್ ಪಠ್ಯಗಳ ಪ್ರತಿಗಳನ್ನು ಪ್ರಕಾಶನದ ಉಸ್ತುವಾರಿ ಇಲಾಖೆ ವಿತರಿಸಿದೆ ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ. ತೆಗೆದುಹಾಕಲಾದ ಪುಸ್ತಕಗಳ ಸಂಖ್ಯೆಗೆ ಸಚಿವಾಲಯವು ಅಂಕಿಅಂಶಗಳನ್ನು ಒದಗಿಸಿಲ್ಲ, ಆದರೆ ಎರಡು ಮೂಲಗಳು, ಕಾಬೂಲ್ನ ಪ್ರಕಾಶಕರು ಮತ್ತು ಸರ್ಕಾರಿ ಉದ್ಯೋಗಿ, ತಾಲಿಬಾನ್ ಆಳ್ವಿಕೆಯ ಮೊದಲ ವರ್ಷದಲ್ಲಿ ಮತ್ತು ಇತ್ತೀಚಿನ ತಿಂಗಳುಗಳಲ್ಲಿ ಪಠ್ಯಗಳನ್ನು ಸಂಗ್ರಹಿಸಲಾಗಿದೆ ಎಂದು ಹೇಳಿದರು.

ಪಾಕಿಸ್ತಾನ ಭಯೋತ್ಪಾದನೆ ನಿಲ್ಲಿಸಿದರೆ ಮಾತುಕತೆ : ಪರ್ವತನೇನಿ

ನ್ಯೂಯಾರ್ಕ್: ಪಾಕಿಸ್ತಾನದೊಂದಿಗೆ ಮಾತುಕತೆಗೆ ತೊಡಗಿಸಿಕೊಳ್ಳುವ ಮೊದಲ ಸಮಸ್ಯೆಯು ಭಯೋತ್ಪಾದನೆಯನ್ನು ನಿಲ್ಲಿಸುವುದಾಗಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ರಾಯಭಾರಿ ಹೇಳಿದ್ದಾರೆ. ಭಾರತವು ಗಡಿಯಾಚೆಗಿನ ಮತ್ತು ಜಾಗತಿಕ ಭಯೋತ್ಪಾದನೆಗೆ ದೀರ್ಘಕಾಲದ ಬಲಿಪಶುವಾಗಿದೆ ಮತ್ತು ಶೂನ್ಯ ಸಹಿಷ್ಣುತೆಯನ್ನು ಹೊಂದಿದೆ ಎಂದು ಅವರು ಒತ್ತಿ ಹೇಳಿದರು.

ಪಾಕಿಸ್ತಾನದೊಂದಿಗೆ, ನಾವು ಹೊಂದಿರುವ ಪ್ರಮುಖ ಸಮಸ್ಯೆ ಭಯೋತ್ಪಾದನೆಯಾಗಿದೆ ಎಂದು ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್ ಸಂವಾದದಲ್ಲಿ ಹೇಳಿದರು. ಹರೀಶ್ ಅವರು ಕೊಲಂಬಿಯಾ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಟರ್ನ್ಯಾಷನಲ್ ಅಂಡ್ ಪಬ್ಲಿಕ್ ಅಫೇರ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮುಖ ಜಾಗತಿಕ ಸವಾಲುಗಳಿಗೆ ಪ್ರತಿಕ್ರಿಯಿಸುವುದು ಭಾರತ ಮಾರ್ಗ ಕುರಿತು ಮುಖ್ಯ ಭಾಷಣ ಮಾಡಿದರು.

ಪ್ರಧಾನ ಭಾಷಣದ ನಂತರ ಸಂವಾದಾತಕ ಅಧಿವೇಶನದಲ್ಲಿ ಪಾಕಿಸ್ತಾನದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹರೀಶ್, ಪ್ರಧಾನಿ ನರೇಂದ್ರ ಮೋದಿ ಅವರು ಪಾಕಿಸ್ತಾನವನ್ನು ತಲುಪಲು ಮತ್ತು ತೊಡಗಿಸಿಕೊಳ್ಳಲು ಪ್ರಯತ್ನಿಸಿದ್ದಾರೆ ಎಂದು ಹೇಳಿದರು. ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳು ನಂಬಿಕೆಯನ್ನು ಕಳೆದುಕೊಂಡಿವೆ. ಪಾಕಿಸ್ತಾನದೊಂದಿಗೆ ತೊಡಗಿಸಿಕೊಳ್ಳುವಲ್ಲಿ ಮೊದಲ ವಿಷಯವೆಂದರೆ ಭಯೋತ್ಪಾದನೆಯನ್ನು ನಿಲ್ಲಿಸುವುದು ಪ್ರಮುಖ ವಿಷಯವಾಗಿದೆ ಎಂದರು. ಹರೀಶ್ ತಮ್ಮ ಭಾಷಣದಲ್ಲಿ ಭಯೋತ್ಪಾದನೆ ಜಾಗತಿಕ ಮಟ್ಟದಲ್ಲಿ ದೊಡ್ಡ ಸಮಸ್ಯೆಯಾಗಿದೆ ಎಂದು ಒತ್ತಿ ಹೇಳಿದರು.



ಭಾರತವು ಗಡಿಯಾಚೆಗಿನ ಮತ್ತು ಜಾಗತಿಕ ಭಯೋತ್ಪಾದನೆಗೆ ದೀರ್ಘಕಾಲದ ಬಲಿಪಶುವಾಗಿದೆ ಎಂದು ಅವರು ಭಯೋತ್ಪಾದನೆಯನ್ನು ಮಾನವೀಯತೆಗೆ ಅಸ್ತಿತ್ವದ ಬೆದರಿಕೆ ಎಂದು ವಿವರಿಸಿದರು, ಅದು ಯಾವುದೇ ಗಡಿಗಳನ್ನು ತಿಳಿದಿಲ್ಲ, ಯಾವುದೇ ರಾಷ್ಟ್ರೀಯತೆ ಮತ್ತು ಯಾವುದೇ ಸಮರ್ಥನೆಯನ್ನು ಹೊಂದಿರುವುದಿಲ್ಲ. ಯೋತ್ಪಾದನೆಯನ್ನು ಅಂತರರಾಷ್ಟ್ರೀಯ ಸಹಯೋಗದಿಂದ ಮಾತ್ರ ಎದುರಿಸಲು ಸಾಧ್ಯ -ಪರ್ವತನೇನಿ ಹರೀಶ್

ಮಹಾರಾಷ್ಟ್ರ ಚುನಾವಣೆ : ಬಾಲಿವುಡ್ ನಟ-ನಟಿಯರಿಂದ ಮತದಾನ

ಮುಂಬೈ: ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಖ್ಯಾತ ಬಾಲಿವುಡ್ ನಟರಾದ ಅಕ್ಷಯ್ ಕುಮಾರ್, ರಾಜ್‌ಕುಮಾರ್ ರಾವ್, ಶುಭಾ ಖೋಟೆ, ನಿರ್ಮಾಪಕ ಫರ್ಹಾನ್ ಅಖ್ತರ್ ಮತ್ತು ಇತರ ಬಾಲಿವುಡ್ ನಟರು ಇಂದು ತಮ್ಮ ಹಕ್ಕು ಚಲಾಯಿಸಿದರು. ರಾಜ್ಯದ ಎಲ್ಲಾ 288 ವಿಧಾನಸಭಾ ಕ್ಷೇತ್ರಗಳಲ್ಲಿ ಬೆಳಗ್ಗೆ 7 ಗಂಟೆಗೆ ಮತದಾನ ಆರಂಭವಾಗಿದ್ದು, ಸಂಜೆ 6 ಗಂಟೆಗೆ ಮತದಾನ ಮುಕ್ತಾಯವಾಗಲಿದೆ.

ಒಳ್ಳೆಯ ವಿಷಯವೆಂದರೆ ವ್ಯವಸ್ಥೆಗಳು ಉತ್ತಮವಾಗಿವೆ (ಮತಗಟ್ಟೆಯಲ್ಲಿ), ವಿಶೇಷವಾಗಿ ಹಿರಿಯ ನಾಗರಿಕರಿಗೆ, ಸ್ವಚ್ಛತೆ ಇದೆ.

ಪ್ರತಿಯೊಬ್ಬರೂ ಹೊರಗೆ ಬಂದು ಮತ ಚಲಾಯಿಸಬೇಕು ಏಕೆಂದರೆ ಅದು ಅತ್ಯಂತ ಮುಖ್ಯವಾದ ವಿಷಯ ಎಂದು ಅಕ್ಷಯ್ ಕುಮಾರ್ ಮತ ಚಲಾಯಿಸಿದ ನಂತರ ಸುದ್ದಿಗಾರರಿಗೆ ತಿಳಿಸಿದರು. ರಾವ್ ಅವರು ಜನರು ಹೆಚ್ಚು ಹೆಚ್ಚು ಮತದಾನ ಮಾಡುವಂತೆ ಜನರಲ್ಲಿ ಮನವಿ ಮಾಡಿದರು. ಪ್ರಜಾಪ್ರಭುತ್ವದಲ್ಲಿ

ಮತದಾನ ಮಾಡುವಂತೆ ಮನವಿ

ಮತದಾನ ಮಾಡುವುದು ನಮ ಹಕ್ಕು, ಆದ್ದರಿಂದ ನಾವು ಮಹಾರಾಷ್ಟ್ರದಲ್ಲಿ ಮತ ಚಲಾಯಿಸುವುದು ಮುಖ್ಯವಾಗಿದೆ. ನಾನು ನನ್ನ ಕರ್ತವ್ಯ ನಿರ್ವಹಿಸಿದ್ದೇನೆ.

ಇದು ನಿಮ್ಮ ಸರದಿ, ದಯವಿಟ್ಟು ಮತ ಚಲಾಯಿಸಿ, ಇದು ಬಹಳ ಮುಖ್ಯ, ಎಂದು ಸ್ತ್ರೀ 2 ನಟ ಪಿಟಿಐಗೆ ತಿಳಿಸಿದರು.

ಹಿರಿಯ ನಟಿ ಶುಭಾ ಖೋಟೆ ಅವರು ತಮ ಪುತ್ರಿ ಭಾವನಾ ಬಲ್ಸಾವರ್ ಅವರೊಂದಿಗೆ ಮತಚಲಾಯಿಸಿದರು. ನಿರ್ಮಾಪಕ ಫರ್ಹಾನ್ ಅಖ್ತರ್ ಮತ್ತು ಅವರ ಸಹೋದರಿ ಜೋಯಾ ಅಖ್ತರ್ ಕೂಡ ಮತದಾನ ಮಾಡಿದರು. ತಮ ಹಕ್ಕು ಚಲಾಯಿಸಿದ ನಟ ಸೋನು ಸೂದ್, ಒಂದು ದೇಶಕ್ಕೆ ಮತದಾನ ಮುಖ್ಯವಾಗಿದೆ, ಮತದಾನ ಮಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ, ಅದನ್ನು ರಜಾದಿನವಾಗಿ ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಚುನಾವಣಾ ಸಮಯದಲ್ಲಿ ಎಲ್ಲಾ ವಯಸ್ಸಿನ ಜನರು ತಮ ಪ್ರಜಾಸತ್ತಾತಕ ಹಕ್ಕನ್ನು ಚಲಾಯಿಸುವುದು ಮುಖ್ಯ ಎಂದು ಹೇಳಿದ್ದಾರೆ. ನಾನು ನನ್ನ ಮತವನ್ನು ಚಲಾಯಿಸಿದ್ದೇನೆ. ಮತ ಚಲಾಯಿಸುವುದು ಬಹಳ ಮುಖ್ಯ ಮತ್ತು ನೀವು ಚಿಕ್ಕವರಾಗಿರಲಿ ಅಥವಾ ವಯಸ್ಸಾದವರಾಗಿರಲಿ ಭಾರತದಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸಬೇಕು, ನಿಮನ್ನು ಲಭ್ಯವಾಗುವಂತೆ ಮಾಡಿ ಏಕೆಂದರೆ ಒಂದು ಮತವು ದೇಶವನ್ನು ಬದಲಾಯಿಸುತ್ತದೆ -ಟಿವಿ ನಟಿ ಗೌತಮಿ ಕಪೂರ್

ಬಟೋಗೆ ತೋ ಕಟೋಗೆ ಘೋಷಣೆ ಅಸಂವಿಧಾನಿಕ: ಅಖಿಲೇಶ್

ಲಕ್ನೋ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಬಟೋಗೆ ತೋ ಕಟೋಗೆ ಘೋಷಣೆಯಿಂದ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ದೂರವಾಗಲು ಪ್ರಾರಂಭಿಸಿವೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

ಯಾದವ್ ಅವರು ಹಿಂದೂಗಳು ಒಗ್ಗಟ್ಟಿನಿಂದ ಇರಲು ಸ್ಪಷ್ಟವಾಗಿ ಕರೆ ನೀಡುವ ಮೂಲಕ ಆದಿತ್ಯನಾಥ್ ನೀಡಿದ ಘೋಷಣೆಯನ್ನು ಅಸಂವಿಧಾನಿಕ ಮತ್ತು ದೇಶದ ಇತಿಹಾಸದಲ್ಲಿ ಅತ್ಯಂತ ನಕಾರಾತ್ಮಕ ಎಂದು ಬಣ್ಣಿಸಿದ್ದಾರೆ.

ಇಲ್ಲಿನ ಬಕ್ಷಿ ಕಾ ತಲಾಬ್ ಪ್ರದೇಶದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಘೋಷಣೆಯು ಬ್ರಿಟಿಷರ ಒಡೆದು ಆಳುವ ನೀತಿಯಂತಿದೆ. ಬ್ರಿಟಿಷರು ತೊರೆದರು ಆದರೆ ಅವರ ಆಲೋಚನೆಯೊಂದಿಗೆ ಜನರು ತಮ್ಮ ಆಲೋಚನೆಗಳನ್ನು ಮುಂದಕ್ಕೆ ಕೊಂಡೊಯ್ಯುತ್ತಿದ್ದಾರೆ ಎಂದು ಆರೋಪಿಸಿದರು. ಯಾವುದೇ ಹೆಸರುಗಳನ್ನು ತೆಗೆದುಕೊಳ್ಳದೆ, ಒಬ್ಬರ ಆಲೋಚನೆಗಳು ಮತ್ತು ಮಾತುಗಳಿಂದ ಒಬ್ಬರು ಯೋಗಿ ಯಾಗುತ್ತಾರೆಯೇ ಹೊರತು ಬಟ್ಟೆಯಿಂದಲ್ಲ ಎಂದು ಅವರು ಪರೋಕ್ಷವಾಗಿ ಯೋಗಿ ಆದಿತ್ಯನಾಥ್ ಅವರ ವಿರುದ್ಧ ಹರಿಹಾಯ್ದರು. ಉಪಚುನಾವಣೆಯಲ್ಲಿ ಹೀನಾ ಯವಾಗಿ ಸೋಲನುಭವಿಸಲಿದೆ ಎಂಬುದು ಬಿಜೆಪಿಗೆ

**ಅಧಿಕಾರ ದುರುಪಯೋಗ ಪಡಿಸಿಕೊಂಡು ಮತ ಚಲಾಯಿಸುವುದನ್ನು ತಡೆಯ



ಮತ್ತೊಮ್ಮೆ ರಿಲೀಸ್ ಆಗಲಿದೆ 'ಪುಷ್ಪ' ಸಿನಿಮಾ

ಬಾಕ್ಸ್ ಆಫೀಸ್‌ನಲ್ಲಿ ಹೊಸ ದಾಖಲೆ ಬರೆಯಲು 'ಪುಷ್ಪ 2' ಸಿನಿಮಾ ಬರುತ್ತಿದೆ. ಅದಕ್ಕೂ ಮೊದಲು 'ಪುಷ್ಪ' ಸಿನಿಮಾವನ್ನು ಮತ್ತೊಮ್ಮೆ ಚಿತ್ರಮಂದಿರದಲ್ಲಿ ರಿಲೀಸ್ ಮಾಡಲು ಸಿದ್ಧತೆ ನಡೆದಿದೆ. ಶೀಘ್ರದಲ್ಲೇ 'ಪುಷ್ಪ' ಸಿನಿಮಾ ಮರು ಬಿಡುಗಡೆ ಆಗಲಿದೆ. ಈ ಸಿನಿಮಾವನ್ನು ದೊಡ್ಡ ಪರದೆಯ ಮೇಲೆ ಮತ್ತೊಮ್ಮೆ ನೋಡಲು ಅಲ್ಲು ಅರ್ಜುನ್ ಅಭಿಮಾನಿಗಳು ಕಾದಿದ್ದಾರೆ.

ಭಾರಿ ಬಜೆಟ್‌ನಲ್ಲಿ ಸಿದ್ಧವಾಗಿದ್ದ 'ಪುಷ್ಪ' ಸಿನಿಮಾ 2021ರಲ್ಲಿ ಬಿಡುಗಡೆ ಆಗಿತ್ತು. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಆ ಸಿನಿಮಾ ಧೂಳೆಬ್ಬಿಸಿತ್ತು. ತೆಲುಗಿನ ಆ ಚಿತ್ರ ಬೇರೆ ಬೇರೆ ಭಾಷೆಗಳಿಗೆ ಡಬ್ ಆಗಿ ತೆರೆಕಂಡಿತ್ತು. ವಿಶೇಷವಾಗಿ, ಹಿಂದಿ ಪ್ರೇಕ್ಷಕರು 'ಪುಷ್ಪ' ಸಿನಿಮಾವನ್ನು ಸಖತ್ ಮೆಚ್ಚಿಕೊಂಡಿದ್ದರು. ಬಳಿಕ ಒಟಿಟಿ ಮತ್ತು ಟಿವಿಯಲ್ಲಿ ಪ್ರಸಾರ ಆದಾಗಲೂ ಜನರಿಂದ ಭರ್ಜರಿ ಪ್ರತಿಕ್ರಿಯೆ ಸಿಕ್ಕಿತ್ತು. ಈಗ ಆ ಸಿನಿಮಾ ಮತ್ತೊಮ್ಮೆ ಚಿತ್ರಮಂದಿರಗಳಲ್ಲಿ ಪ್ರದರ್ಶನ ಆಗಲಿದೆ. 'ಪುಷ್ಪ 2' ಬಿಡುಗಡೆ ಹೊಸ್ತಿಲಿನಲ್ಲಿ 'ಪುಷ್ಪ' ಚಿತ್ರವನ್ನು ರೀ-ರಿಲೀಸ್ ಮಾಡಲು ನಿರ್ಧರಿಸಲಾಗಿದೆ.

ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ ಜೋಡಿಯಾಗಿ ನಟಿಸಿದ್ದ 'ಪುಷ್ಪ' ಸಿನಿಮಾದ ಸೀಕ್ವೆಲ್ ಆಗಿ 'ಪುಷ್ಪ 2' ಸಿನಿಮಾ ಸಿದ್ಧವಾಗಿದೆ. ಡಿಸೆಂಬರ್ 5ರಂದು 'ಪುಷ್ಪ 2' ಬಿಡುಗಡೆ ಆಗಲಿದೆ. ಪ್ರೇಕ್ಷಕರಿಗೆ ಈ ಕಥೆ ಮತ್ತೊಮ್ಮೆ ನೆನಪಿಸಬೇಕು ಎಂಬ ಕಾರಣಕ್ಕೆ 'ಪುಷ್ಪ' ಸಿನಿಮಾವನ್ನು ಮತ್ತೆ ಬಿಡುಗಡೆ ಮಾಡಲಾಗುತ್ತಿದೆ.

ಮೈಸೂರಿಗೆ ಬರಲಿದ್ದಾರೆ ರಾಮ್ ಚರಣ್, ಜಾನ್ವಿ ಕಪೂರ್



ಚಿತ್ರತಂಡಕ್ಕೆ ಸಾಥ್ ಕೊಡ್ತಾರಾ ಶಿವಣ್ಣ

ಟಾಲಿವುಡ್ ನಟ ರಾಮ್ ಚರಣ್ ಮತ್ತು ಜಾನ್ವಿ ಕಪೂರ್ ಹೊಸ ಸಿನಿಮಾದಲ್ಲಿ ಜೊತೆಯಾಗಿ ನಟಿಸುತ್ತಿದ್ದು, ಚಿತ್ರೀಕರಣಕ್ಕಾಗಿ ಮೈಸೂರಿಗೆ ಬರಲಿದ್ದಾರೆ. ಇವರೊಂದಿಗೆ ಕನ್ನಡದ ನಟ ಶಿವಣ್ಣ ಕೂಡ ಸಾಥ್ ನೀಡಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗೆ ಗ್ರಾಸವಾಗಿದೆ. 'ಉಪ್ಪೇನಾ' ನಿರ್ದೇಶಕ ಬುಚ್ಚಿ ಬಾಬು ಅವರು 'ಆರ್ ಸಿ 16' ಚಿತ್ರಕ್ಕೆ ಆಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ರಾಮ್ ಚರಣ್, ಜಾನ್ವಿ ಜೊತೆ ಶಿವಣ್ಣ ಕೂಡ ಪವರ್‌ಫುಲ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಸಿನಿಮಾದ ಫಸ್ಟ್ ಶೆಡ್ಯೂಲ್ ಶೂಟಿಂಗ್ ಅನ್ನು ನ.22ರಂದು ಪ್ರಾರಂಭಿಸಲಿದ್ದಾರೆ ಎನ್ನಲಾಗಿದೆ. ಚಿತ್ರತಂಡಕ್ಕೆ ಶಿವಣ್ಣ ಕೂಡ ಸಾಥ್ ನೀಡಲಿದ್ದಾರೆ ಎನ್ನಲಾಗಿದೆ. ಮೈಸೂರಿನ ಕೆಲವು ಪುರಾತನ ಕಟ್ಟಡಗಳು ಹಾಗೂ ಮೈಸೂರಿನ ಹೊರವಲಯದ ಅರಣ್ಯ ಪ್ರದೇಶಗಳಲ್ಲಿ ಸಿನಿಮಾದ ಚಿತ್ರೀಕರಣ ನಡೆಯಲಿದೆಯಂತೆ.

ಶಿವಣ್ಣ ಅವರು ಮೈಸೂರಿನಲ್ಲಿ ಸಿನಿಮಾದ ಶೂಟಿಂಗ್ ಮುಗಿಸಿ ನಂತರ ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಲಿದ್ದಾರೆ ಎಂದು ಹೇಳಲಾಗುತ್ತಿದೆ. ಹಾಗಾಗಿ ಚಿತ್ರತಂಡ ಶೂಟಿಂಗ್ ಪ್ಲ್ಯಾನ್ ಮಾಡಿಕೊಂಡಿದೆ. ಅಂದಹಾಗೆ, ರಾಮ್ ಚರಣ್ ನಟನೆಯ 'ಗೇಮ್ ಚೇಂಜರ್' ಸಿನಿಮಾ ಕೆಲಸ ಮುಗಿದಿದೆ. ನಾಯಕಿಯಾಗಿ ಕಿಯಾರಾ ಅಡ್ವಾಣಿ ನಟಿಸಿದ್ದಾರೆ. ಈ ಸಿನಿಮಾ ಬಗ್ಗೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ.

ಹೊಳೆ ಹಾಡಿಗೆ ರಶ್ಮಿಕಾ ಹೆಜ್ಜೆ

ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್

ಕೊಡಗಿನ ಬೆಡಗಿ ರಶ್ಮಿಕಾ ಮಂದಣ್ಣ 'ಪುಷ್ಪ 2' ಮತ್ತು 'ಛಾವಾ' ಸಿನಿಮಾಗಳು ರಿಲೀಸ್‌ಗೆ ಸಜ್ಜಾಗಿದೆ. ಇದರ ನಡುವೆ ಅವರ ಬಾಲಿವುಡ್ ಸಿನಿಮಾ ಬಗ್ಗೆ ಬಿಗ್ ಅಪ್‌ಡೇಟ್ ವೊಂದು ಸಿಕ್ಕಿದೆ. 'ಸಿಖಂದರ್' ಸಿನಿಮಾದಲ್ಲಿ ಸಲ್ಮಾನ್ ಖಾನ್ ಜೊತೆ ನಟಿ ಈದ್ ಮತ್ತು ಹೋಳಿ ಕುರಿತಾದ ಹಾಡಿಗೆ ಭರ್ಜರಿಯಾಗಿ ಹೆಜ್ಜೆ ಹಾಕಲಿದ್ದಾರೆ ಎನ್ನಲಾದ ಸುದ್ದಿಯೊಂದು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿದೆ. ಸೋಲಿನ ಸುಳಿಯಲ್ಲಿರುವ ಸಲ್ಮಾನ್ ಇದೀಗ ಸಕ್ಸಸ್‌ಗಾಗಿ ಖ್ಯಾತ ನಿರ್ದೇಶಕ ಎ.ಆರ್ ಮುರುಗದಾಸ್ ಮತ್ತು ರಶ್ಮಿಕಾ ಜೊತೆ ಕೈಜೋಡಿಸಿದ್ದಾರೆ. ಈಗಾಗಲೇ ಸಲ್ಮಾನ್ ಖಾನ್ ಮತ್ತು ರಶ್ಮಿಕಾ ಭಾಗದ ಚಿತ್ರೀಕರಣ ಮುಂಬೈ ಮತ್ತು ಹೈದರಾಬಾದ್‌ನಲ್ಲಿ ಚಿತ್ರೀಕರಣ ಮಾಡಲಾಗುತ್ತಿದೆ. ಸಿನಿಮಾಗಾಗಿ ವಿಶೇಷವಾಗಿರುವ ಯೋಜನೆಯನ್ನು ಚಿತ್ರತಂಡ ಪ್ಲ್ಯಾನ್ ಮಾಡಿದೆ ಎನ್ನಲಾಗಿದೆ.

'ಸಿಖಂದರ್' ಚಿತ್ರದಲ್ಲಿ ಈದ್ ಮತ್ತು ಹೋಳಿ ಎರಡು ಹಬ್ಬಗಳ ಆಧಾರದ ಮೇಲೆ ಎರಡು ಹಾಡುಗಳನ್ನು ಚಿತ್ರೀಕರಿಸಲು ಚಿತ್ರತಂಡ ಪ್ಲ್ಯಾನ್ ಮಾಡಿದೆ ಎನ್ನಲಾಗಿದೆ. ಈ ಹಾಡುಗಳಿಗೆ ಸಲ್ಮಾನ್ ಮತ್ತು ರಶ್ಮಿಕಾ ಭರ್ಜರಿಯಾಗಿ ಹೆಜ್ಜೆ ಹಾಕಲಿದ್ದಾರಂತೆ. ಕಥೆಯ ಜೊತೆಗೆ ಡ್ಯಾನ್ಸ್‌ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರೆ 'ಸಿಖಂದರ್' ಚಿತ್ರಕ್ಕೆ ಪ್ಲಸ್ ಆಗಬಹುದು ಎಂಬುದು ಚಿತ್ರತಂಡ ಲೆಕ್ಕಾಚಾರವಾಗಿದೆ. ಹಾಗಾದ್ರೆ ಈ ಸುದ್ದಿ ನಿಜನಾ ಕಾದುನೋಡಬೇಕಿದೆ. ಸದ್ಯ ಈ ಸುದ್ದಿ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ.

ಇನ್ನೂ ಈ ಸಿನಿಮಾದಲ್ಲಿ ಸಲ್ಮಾನ್ ಜೊತೆ ರಶ್ಮಿಕಾ, 'ಮಗಧೀರ' ನಟಿ ಕಾಜಲ್ ಸೇರಿದಂತೆ ಅನೇಕರು ನಟಿಸುತ್ತಿದ್ದಾರೆ. ಮುಂದಿನ ವರ್ಷ ಈದ್ ಹಬ್ಬದಂದು ಈ ಚಿತ್ರ ರಿಲೀಸ್ ಆಗಲಿದೆ.

ಡಿವೋರ್ಸ್ ಬಗ್ಗೆ ಎ.ಆರ್. ರೆಹಮಾನ್ ರಿಯಾಕ್ಷನ್

ಖ್ಯಾತ ಸಂಗೀತ ಸಂಯೋಜಕ, ಗಾಯಕ ಎ.ಆರ್. ರೆಹಮಾನ್ ಮತ್ತು ಸಾಯಿರಾ ಬಾನು 29 ವರ್ಷಗಳ ದಾಂಪತ್ಯಕ್ಕೆ ಅಂತ್ಯ ಹಾಡಿದ್ದಾರೆ. ಡಿವೋರ್ಸ್ ಕುರಿತು ನಿನ್ನೆ (ನ.19) ಅಧಿಕೃತವಾಗಿ ಸಾಯಿರಾ ಖಚಿತಪಡಿಸಿದ್ದರು. ಇದೀಗ ಎ.ಆರ್. ರೆಹಮಾನ್ ಅವರು ವಿಚ್ಛೇದನ ಕುರಿತು ಮೌನ ಮುರಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಎ.ಆರ್. ರೆಹಮಾನ್ ಪ್ರತಿಕ್ರಿಯಿಸಿ, ನಾವು ಇನ್ನೇನು 30 ವರ್ಷಗಳ ದಾಂಪತ್ಯಕ್ಕೆ ಕಾಲಿಡಬೇಕಿತ್ತು. ಆದರೆ, ಯಾರೂ ಊಹಿಸದ ಅಂತ್ಯ ಸಿಕ್ಕಿದೆ. ಮುರಿದ ಹೃದಯಗಳ ಭಾರಕ್ಕೆ ದೇವರ ಸಿಂಹಾಸನವೂ ನಡುಗಬಹುದು. ಆದರೂ, ಈ ಚೂರಾದ ಸಂಬಂಧದಲ್ಲೂ ನಾವು ಅರ್ಥವನ್ನು ಹುಡುಕುತ್ತೇವೆ. ಒಡೆದ ತುಣುಕುಗಳು ಮತ್ತೆ ಎಂದಿಗೂ ಒಂದಾಗಲಾರದು. ನಮ್ಮ ಖಾಸಗಿತನ ಗೌರವಿಸಿದ ಗೆಳೆಯರಿಗೆ ಧನ್ಯವಾದ ಎಂದಿದ್ದಾರೆ.

ಅಂದಹಾಗೆ, ಈ ನಿರ್ಧಾರವು ಅವರ ಸಂಬಂಧದಲ್ಲಿ ಗಮನಾರ್ಹವಾದ ಭಾವನಾತ್ಮಕ ಒತ್ತಡದ ನಂತರ ಬಂದಿದೆ. ಒಬ್ಬರಿಗೊಬ್ಬರು ಆಳವಾದ ಪ್ರೀತಿಯ ಹೊರತಾಗಿಯೂ, ಉದ್ವಿಗ್ನತೆ ಮತ್ತು ತೊಂದರೆಗಳು ತಮ್ಮ ನಡುವೆ ದುಸ್ತರವಾದ ಅಂತರವನ್ನು ಸೃಷ್ಟಿಸಿವೆ ಎಂದು ಸಾಯಿರಾ ಬಾನು ಅವರು ದಾಂಪತ್ಯ ಅಂತ್ಯವಾಗಿರುವ ಬಗ್ಗೆ ಖಚಿತಪಡಿಸಿದ್ದರು.

ಎ.ಆರ್.ರೆಹಮಾನ್ ಅವರು 1995ರಲ್ಲಿ ಸಾಯಿರಾ ಬಾನು ಅವರೊಂದಿಗೆ ವಿವಾಹವಾಗಿದ್ದರು. ದಂಪತಿಗೆ ಖತೀಜಾ, ರಹೀಮಾ ಮತ್ತು ಅಮೀನ್ ಎಂಬ ಮೂವರು ಮಕ್ಕಳಿದ್ದಾರೆ.

ರುಧಿರಂ ಚಿತ್ರದ ಫಸ್ಟ್ ಲುಕ್ ಬಿಡುಗಡೆ!

ರುಧಿರಂ, ಜಿಶೋ ಮತ್ತು ಜೋಸೆಫ್ ಕಿರಣ್ ಜಾರ್ಜ್ ಸ್ಕ್ರಿಪ್ಟ್ ಬರೆದಿದ್ದು ವೈದ್ಯರ ಜೀವನದಲ್ಲಿ ನಡೆಯುವ ನಿಗೂಢ ಘಟನೆಗಳ ಬಗ್ಗೆ ವಿವರಿಸುತ್ತದೆ. ಜಿಶೋ ಲೋನ್ ಆಂಟೋನಿ ಚೊಚ್ಚಲ ನಿರ್ದೇಶನದ ರುಧಿರಂ ಸಿನಿಮಾದಲ್ಲಿ ರಾಜ್ ಬಿ ಶೆಟ್ಟಿ ಮತ್ತು ಅಪರ್ಣಾ ಬಾಲಮುರಳಿ ಅಭಿನಯಿಸಿದ್ದಾರೆ. ರುಧಿರಂ ಚಿತ್ರದ ಫಸ್ಟ್ ಲುಕ್ ಮಂಗಳವಾರ ಅನಾವರಣಗೊಂಡಿದೆ. ಎದ್ದುಕಾಣುವ ಕೆಂಪು ಹಿನ್ನೆಲೆಯಲ್ಲಿ ಹೊಂದಿಸಲಾದ ಪೋಸ್ಟರ್, ಬಿಳಿ ಪಿಪಿಇ ಕವರ್‌ನಲ್ಲಿ ಕುಳಿತಿರುವ ರಾಜ್‌ನನ್ನು ಚಿತ್ರಿಸುತ್ತದೆ, ಆದರೆ ಅಪರ್ಣಾ ಆತನ ಪಕ್ಕದಲ್ಲಿ ಬಂಡೆಯಂತೆ ಒರಟಾದ ಅವತಾರದಲ್ಲಿ ನಿಂತಿದ್ದಾರೆ. ರುಧಿರಂ, ಜಿಶೋ ಮತ್ತು ಜೋಸೆಫ್ ಕಿರಣ್ ಜಾರ್ಜ್ ಸ್ಕ್ರಿಪ್ಟ್ ಬರೆದಿದ್ದು ವೈದ್ಯರ ಜೀವನದಲ್ಲಿ ನಡೆಯುವ ನಿಗೂಢ ಘಟನೆಗಳ ಬಗ್ಗೆ ವಿವರಿಸುತ್ತದೆ. 2023 ರಲ್ಲಿ ಪ್ರಾರಂಭಿವಾದ ಈ ಚಿತ್ರವು ಆರಂಭದಲ್ಲಿ ಮಲಯಾಳಂ ಚಿತ್ರರಂಗದಲ್ಲಿ ರಾಜ್ ಅವರ ಚೊಚ್ಚಲ ಚಿತ್ರ ಎಂದು ಪ್ಲಾನ್ ಮಾಡಲಾಗಿತ್ತು. ರಾಜ್ ಬಿ ಶೆಟ್ಟಿ ಟರ್ಬೋ ಮತ್ತು ಕೊಂಡಲ್‌ನಂತಹ ಮಲಯಾಳಂ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಹಿಂದೆ ನಮ್ಮೊಂದಿಗೆ ಮಾತನಾಡಿದ ಜಿಶೋ, ರುಧಿರಂ ಒಂದು ಸೇಡಿನ ಕಥೆಯಾಗಿದೆ, ತಾಂತ್ರಿಕವಾಗಿ ಹೇಳುವುದಾದರೆ, ಚಿತ್ರಕ್ಕೆ ಸಾಜದ್ ಕಾಕ್ಕು ಅವರ ಛಾಯಾಗ್ರಹಣವಿದೆ.

ಅಭಿಮಾನಿಗಳ ಎದೆ ನಡುಗಿಸಿದ ವೈಟ್ ಬ್ಯಾಕ್‌ಗ್ರೌಂಡ್ ಪೋಸ್ಟ್

ವಿರಾಟ್ ಕೊಹ್ಲಿ ಪೋಸ್ಟ್

ತನ್ನ ಆಟದ ಮೂಲಕವೇ ಇಡೀ ವಿಶ್ವದಾದ್ಯಂತ ಕೋಟ್ಯಾಂತರ ಅಭಿಮಾನಿಗಳನ್ನು ಸಂಪಾದಿಸಿರುವ ವಿರಾಟ್ ಕೊಹ್ಲಿಗೆ ಸೋಶಿಯಲ್ ಮೀಡಿಯಾದಲ್ಲೂ ಅಸಂಖ್ಯಾತ ಫಾಲೋವರ್ಸ್‌ಗಳಿದ್ದಾರೆ. ಹೀಗಾಗಿ ಕೊಹ್ಲಿ ತನ್ನ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಯಾವುದೇ ಪೋಸ್ಟ್ ಹಂಚಿಕೊಂಡರು ಅದು ಕ್ಷಣ ಮಾತ್ರದಲ್ಲಿ ಸಾಕಷ್ಟು ವೈರಲ್ ಆಗುತ್ತದೆ. ಹಾಗೆಯೇ ದಾಖಲೆಯನ್ನು ನಿರ್ಮಿಸುತ್ತದೆ. ಹೀಗಾಗಿಯೇ ಕೊಹ್ಲಿ ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಒಂದು ಪೋಸ್ಟ್ ಹಂಚಿಕೊಳ್ಳಲು 15 ಕೋಟಿ ಗೂ ಹೆಚ್ಚಿನ ಮೊತ್ತವನ್ನು ಶುಲ್ಕವಾಗಿ ಪಡೆಯುತ್ತಾರೆ ಎಂಬ ವರದಿ ಇದೆ. ಇದೆಲ್ಲದರ ನಡುವೆ ವಿರಾಟ್ ಕೊಹ್ಲಿ ಇಂದು ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿರುರುವ ಪೋಸ್ಟ್‌ವೊಂದು ಅಭಿಮಾನಿಗಳ ಎದೆಯನ್ನು ಕ್ಷಣ ಮಾತ್ರದಲ್ಲಿ ನಡುಗಿಸಿ ಬಿಟ್ಟಿದೆ.

ಪ್ರಸ್ತುತ ವಿರಾಟ್ ಕೊಹ್ಲಿ ಐದು ಪಂದ್ಯಗಳ ಟೆಸ್ಟ್ ಸರಣಿಗಾಗಿ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದಾರೆ. ವಿರಾಟ್ ಕೊಹ್ಲಿಗೆ ಕಳೆದ ಕೆಲವು ತಿಂಗಳುಗಳು ಉತ್ತಮವಾಗಿಲ್ಲ. ಟಿ20 ವಿಶ್ವಕಪ್ ಮುಗಿದ ಬೆನ್ನಲ್ಲೇ ಈ ಮಾದರಿಗೆ ವಿದಾಯ ಹೇಳಿದ್ದ ಕೊಹ್ಲಿ, ಏಕದಿನ ಹಾಗೂ ಟೆಸ್ಟ್ ಮಾದರಿಯಲ್ಲಿ ಆಟ ಮುಂದುವರೆಸುವುದಾಗಿ ಹೇಳಿದ್ದರು. ಆದರೆ ಕೊಹ್ಲಿ ಅಂದುಕೊಂಡಂತೆ ಈ ಮಾದರಿಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿ ಮುಗಿದ ಬಳಿಕ ಕೊಹ್ಲಿ, ಟೆಸ್ಟ್ ಮಾದರಿಗೆ ವಿದಾಯ ಹೇಳಬಹುದು ಎಂಬ ವದಂತಿ ಎದ್ದಿದೆ. ಇದರ ನಡುವೆ ಕೊಹ್ಲಿ ತನ್ನ ಸೋಶಿಯಲ್ ಮೀಡಿಯಾದಲ್ಲಿ ವೈಟ್ ಬ್ಯಾಕ್ ಗ್ರೌಂಡ್ ಇರುವ ಪೋಸ್ಟ್‌ವೊಂದನ್ನು ಹಂಚಿಕೊಂಡು ಅಭಿಮಾನಿಗಳಲ್ಲಿ ಆತಂಕ ಮುಡಿಸಿದ್ದಾರೆ. ಆದರೆ ಕೊಹ್ಲಿ ಮಾಡಿರುವ ಪೋಸ್ಟ್ ಅನ್ನು ಪೂರ್ಣ ಓದಿದ ಅಭಿಮಾನಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಪರ್ತ್ ಟೆಸ್ಟ್‌ಗೆ ಗಿಲ್ ಲಭ್ಯ



ಶುಭ ಸುದ್ದಿ ನೀಡಿದ ಬೌಲಿಂಗ್ ಕೋಚ್

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಐದು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯವು ನವೆಂಬರ್ 22 ರಂದು ಪರ್ತ್‌ನಲ್ಲಿ ಆರಂಭವಾಗಲಿದೆ. ಈ ಟೆಸ್ಟ್ ಆರಂಭಕ್ಕೂ ಮುನ್ನ ಸ್ಟಾರ್ ಆಟಗಾರರ ಅಲಭ್ಯತೆ ಟೀಂ ಇಂಡಿಯಾಕ್ಕೆ ದೊಡ್ಡ ತಲೆನೋವಾಗಿದೆ. ನಾಯಕ ರೋಹಿತ್ ಶರ್ಮಾ ಮೊದಲ ಟೆಸ್ಟ್ ನಿಂದ ಹೊರಗುಳಿಯುವುದಾಗಿ ಮೊದಲೇ ಹೇಳಿದ್ದರು. ಆ ಬಳಿಕ ಅಭ್ಯಾಸದ ವೇಳೆ ಆಟಗಾರರು ಮಾಡಿಕೊಂಡ ಗಾಯ ತಂಡಕ್ಕೆ ಕೊಂಚ ಹಿನ್ನಡೆಯುಂಟು ಮಾಡಿತ್ತು.

ಅಭ್ಯಾಸದ ವೇಳೆ ಟೀಂ ಇಂಡಿಯಾದ ನಾಲ್ವರು ಸ್ಟಾರ್ ಆಟಗಾರರು ಇಂಜುರಿಗೆ ಒಳಗಾಗಿದ್ದರು. ಆದರೆ ಈ ನಾಲ್ವರಲ್ಲಿ ಮೂವರು ಆಟಗಾರರ ಗಾಯ ಅಷ್ಟು ಗಂಭೀರವಾಗಿಲ್ಲ ಎಂಬುದು ಅಭಿಮಾನಿಗಳಿಗೆ ನಿರಾಳ ತಂದಿತ್ತು. ಆದರೆ ಆರಂಭಿಕ ಆಟಗಾರ ಶುಭ್‌ಮನ್ ಗಿಲ್ ಅವರ ಇಂಜುರಿ ಮಾತ್ರ ಕೊಂಚ ಗಂಭೀರವಾಗಿದ್ದು, ಅವರು ಮೊದಲ ಟೆಸ್ಟ್ ಆಡುವುದು ಅನುಮಾನ ಎಂದು ಹೇಳಲಾಗುತ್ತಿತ್ತು.

ಇದಕ್ಕೆ ಪೂರಕವಾಗಿ ಮೊದಲ ಟೆಸ್ಟ್‌ಗೆ ಇಬ್ಬರು ಯುವ ಆಟಗಾರರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿತ್ತು. ಈ ಎಲ್ಲಾ ನಡೆಗಳಿಂದ ಶುಭ್‌ಮನ್ ಗಿಲ್ ಮೊದಲ ಟೆಸ್ಟ್‌ನಿಂದ ಹೊರಗುಳಿಯಲಿದ್ದಾರೆ ಎಂದು ವರದಿಯಾಗಿತ್ತು. ಆದರೀಗ ಗಿಲ್ ಅವರ ಇಂಜುರಿಯ ಬಗ್ಗೆ ಮಾಹಿತಿ ನೀಡಿರುವ ಬೌಲಿಂಗ್ ಕೋಚ್ ಮೋರ್ನೆ ಮೊರ್ಕೆಲ್, ಮೊದಲ ಟೆಸ್ಟ್‌ನಲ್ಲಿ ಗಿಲ್ ಆಡುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶುಬ್‌ಮನ್ ಗಿಲ್ ಅವರ ಗಾಯದ ಬಗ್ಗೆ ಮಾಹಿತಿ ನೀಡಿದ ಬೌಲಿಂಗ್ ಕೋಚ್ ಮೋರ್ನೆ ಮೊರ್ಕೆಲ್, ' ಗಿಲ್ ದಿನದಿಂದ ದಿನಕ್ಕೆ ಸುಧಾರಿಸುತ್ತಿದ್ದಾರೆ. ಹೀಗಾಗಿ ಅವರು ಮೊದಲ ಟೆಸ್ಟ್ ಆಡುವ ಬಗ್ಗೆ, ಟೆಸ್ಟ್ ಪಂದ್ಯದ ದಿನದಂದು ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ.

ಅಲ್ಲದೆ ಅಭ್ಯಾಸದ ವೇಳೆ ಗಿಲ್ ಉತ್ತಮವಾಗಿ ಆಡಿದ್ದರು.

ಅಂತಹ ಪರಿಸ್ಥಿತಿಯಲ್ಲಿ, ಅವರು ಮ್ಯಾಚ್‌ಗೆ ಫಿಟ್ ಆಗಲಿ ಎಂದು ನಾವು ಪ್ರಾರ್ಥಿಸಬೇಕು ಎಂದಿದ್ದಾರೆ.

ಗಿಲ್ ಪರ್ತ್ ಟೆಸ್ಟ್‌ನಲ್ಲಿ ಆಡುವ ಬಗ್ಗೆ ಸಸ್ಪೆನ್ಸ್ ಹುಟ್ಟಿ ಕೊಂಡಿತು. ಆದರೆ ಈಗ ಬೌಲಿಂಗ್ ಕೋಚ್ ಹೇಳಿಕೆಯ ನಂತರ ಅವರು ಆಡುವ ಭರವಸೆ ಮೂಡಿದೆ.

ಟೀಮ್ ಇಂಡಿಯಾದಲ್ಲಿ ಮಹತ್ವದ ಬದಲಾವಣೆ

ತಂಡಕ್ಕೆ ಇಬ್ಬರು ಆಯ್ಕೆ

ಆಸ್ಟ್ರೇಲಿಯಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯಕ್ಕೆ ಟೀಮ್ ಇಂಡಿಯಾದ ಇಬ್ಬರು ಸ್ಟಾರ್ ಆಟಗಾರರು ಅಲಭ್ಯರಾಗಿದ್ದಾರೆ. ವೈಯುಕ್ತಿಕ ಕಾರಣಗಳಿಂದಾಗಿ ರೋಹಿತ್ ಶರ್ಮಾ ಹೊರಗುಳಿದರೆ, ಮೊಣಕೈಗೆ ಗಾಯವಾಗಿರುವ ಹಿನ್ನಲೆ ಶುಭ್‌ಮನ್ ಗಿಲ್ ಪರ್ತ್ ಟೆಸ್ಟ್‌ಗೆ ಅಲಭ್ಯರಾಗಿದ್ದಾರೆ. ಇತ್ತ ಇಬ್ಬರು ಅಲಭ್ಯರಾಗಿರುವ ಕಾರಣ ಇದೀಗ ಬಿಸಿಸಿಐ ಮತ್ತಿಬ್ಬರನ್ನು ತಂಡಕ್ಕೆ ಆಯ್ಕೆ ಮಾಡಿದೆ. ಅದರಂತೆ ಭಾರತ ತಂಡಕ್ಕೆ ಬ್ಯಾಕಪ್ ಆಟಗಾರನಾಗಿ ಕರ್ನಾಟಕದ ಯುವ ದಾಂಡಿಗ ದೇವದತ್ ಪಡಿಕ್ಕಲ್ ಎಂಟ್ರಿ ಕೊಟ್ಟಿದ್ದಾರೆ.

ಇದಕ್ಕೂ ಮುನ್ನ ದೇವದತ್ ಪಡಿಕ್ಕಲ್ ಆಸ್ಟ್ರೇಲಿಯಾ ಎ ವಿರುದ್ಧದ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಭಾರತ ಎ ತಂಡದಲ್ಲಿ ಕಾಣಿಸಿಕೊಂಡಿದ್ದರು. ಇತ್ತ ಮೊದಲ ಟೆಸ್ಟ್‌ಗೆ ಶುಭ್‌ಮನ್ ಗಿಲ್ ಅಲಭ್ಯರಾಗಿರುವ ಕಾರಣ ಇದೀಗ ಅವರನ್ನು ಟೀಮ್ ಇಂಡಿಯಾಗೆ ಸೇರ್ಪಡೆಗೊಳಿಸಲಾಗಿದೆ.

ಮತ್ತೊಂದೆಡೆ ವೇಗಿಗಳ ವಿಭಾಗದಲ್